RNI No. KARKAN/2017/70919
PL No. KA/SK/MYS/1105/2019-2021

ಮೈಸೂರು
ಜನವರಿ 10, 2020
ಸಂಪಾದಕ :
ರಾಜು ಬಿ.

Ph: 8762771148
e-mail: greenpower.monthly@gmail.com

# ಗ್ರೀನ್ ಪವರ್

ನಿರ್ಭಯ, ನಿರಂತರ ಪರಿಸರ ಪ್ರಿಯರ ತಿಂಗಳ ಪತ್ರಿಕೆ

GREEN POWER
Kannada Monthly
VALUME-1
ISSUE-7
PAGES-8
₹ 10/-

ಸಂಪುಟ–1, ಸಂಚಿಕೆ–7, ಪುಟ–8

JANUARY 10, 2020, Mysore : Editor: Raju B.

## 'ಕಾಡಿನ ಮೇಧಾವಿ'
# ಬಂಗ್ಲೆ ಪೋಡು ಹಾಡಿಯ ರಾಮೇಗೌಡ



"ಕಲಿಯುಗದಲ್ಲೂ ಇಂತವರು ಇರೋದ್ರಿದ್ಲೆಯಾ ನಾಡಲ್ಲಿ ಮಳೆ–ಬೆಳೆ ಆಗೋದು" ಅನ್ನೋದು ಆಡು ಮಾತು. ಈ ಪರಿಯ ಅಚ್ಚರಿ ಪಡೋದಿಕ್ಕೂ ಸಕಾರಣಗಳಿವೆ. ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಲಾಭದ ಆಸೆಗೆ ಬಿದ್ದು ಏನನ್ನಾದರೂ ಮಾಡಲು ಸಿದ್ಧವಾಗುವುದು, ಅರಣ್ಯ ಲೂಟಿ, ಕೆರೆಭೂಮಿ ಒತ್ತುವರಿ ಹೀಗೆ ಸಾಲು ಸಾಲು ಅವ್ಯವಹಾರಗಳೇ ಹೆಚ್ಚಾಗಿರುವ ಕಲಿಯುಗದಲ್ಲೂ ನಿಸ್ವಾರ್ಥ ಬದುಕು ಸಾಗಿಸು ವವರು ಅಲ್ಲಲ್ಲಿ ಗೋಚರಿಸಿದಾಗ ಸೋಜಿಗ ಸಂಗತಿ ಎನಿಸುವುದು ಸಹಜ ಎನ್ನುವಂತಾಗಿದೆ. ಪುರಾಣ ಪ್ರಸಿದ್ಧ ಬಿಳಿಗಿರಿರಂಗ ಬೆಟ್ಟದ ಕಿಬ್ಬರಿಯಲ್ಲಿ ಸದ್ದಿಲ್ಲದೆ ಹಸಿರು ಕ್ರಾಂತಿಯಲ್ಲಿ ನಿರತನಾಗಿರುವ ನಿಸ್ವಾರ್ಥಜೀವಿ ಒಬ್ಬನ ಕಾಯಕ ತಿಳಿದಾಗ ನಮಗಾದ ಆನಂದಕ್ಕೆ ಬೆಲೆಕಟ್ಟಲಾಗದು. ಆ ಕಾಯಕ ಯೋಗಿಯೇ "ಬಂಗ್ಲೆ ಪೋಡು ಹಾಡಿಯ ರಾಮೇಗೌಡ".

ದೃಢಕಾಯ, ಅಜಾನುಬಾಹು ದೇಹಸಿರಿ, ಗುಂಗರು ಕೂದಲು, ಅದಕ್ಕಂಟಿದಂತೆ ಬೆಳೆದ ಗಡ್ಡ, ಷರಟು ಪ್ಯಾಂಟುಧಾರಿ ರಾಮೇಗೌಡ ದಣಿವರಿಯದ ವೆಕ್ತಿ. ಕಿರಿದಾದ ಕಣ್ಣುಗಳು, ಎಣ್ಣೆಗೆಂಪು ಮೈ ಬಣ್ಣ. ಬೆಳಗಿನಿಂದ ಮುಸ್ಸಂಜೆ ವರೆಗೂ ಏನನ್ನಾದರು ಮಾಡುತ್ತಿರುವುದೇ ಈತನ ಸ್ವಭಾವ. ಮಾತು ಕಡಿಮೆ. ಪ್ರಶ್ನಿಸಿದರೆ ಮಾತ್ರ ಉತ್ತರ ನೀಡಲು ಮುಂದಾಗುವ ರಾಮೇಗೌಡ ನಮಗೆ ಪರಿಚಯಿಸಬೇಕು ಎಂದೆನಿಸಿದ ಗಿಡದ ಎಲೆಗಳನ್ನಿಡಿದು ಅದರ ಹೆಸರು, ಉಪಯೋಗ, ಔಷಧಿಗುಣ ಇತ್ಯಾದಿಗಳನ್ನು ಚುಟುಕಾಗಿ ವಿವರಿಸುತ್ತಲೇ ಹೋಗುತ್ತಿದ್ದ. ಕೆಲವು ಹಣ್ಣಿನ ಗಿಡ, ಬಳ್ಳಿ ಜಾತಿಯ ಸಸ್ಯಗಳನ್ನು ಹೆಸರಿಸುತ್ತಾ ಇವು ಹಕ್ಕಿಗಳೂ, ಪ್ರಾಣಿಗಳಿಗೆ ಅನುಕೂಲ ಎಂಬುದನ್ನು ಹೇಳಲು ಮರೆಯುತ್ತಿರಲಿಲ್ಲ. ಅರಣ್ಯ ಮನುಷ್ಯರ ಮಾತ್ರ ಹಕ್ಕಲ್ಲ ಪಶು–ಪಕ್ಷಿಗಳಿಗೂ ಅದರ ಸಮಪಾಲು ಇದೆ ಎಂದೇಳುವಂತಿತ್ತು ಆತನ ಮಾತುಕತೆ.

ಪುಟ 4

## RCEP ಮುಗಿಯಿತು. ಮುಂದೇನು?



ಈಗ ಭಾರತ ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಿಗಳನ್ನು ಸ್ಪರ್ಧಾತ್ಮಕಗೊಳಿ ಸಲು ಒಂದಷ್ಟು ಗಂಭೀರ ಪ್ರಯತ್ನ ಮಾಡಬೇಕಿದೆ. ಇದು ಬಂಡವಾಳ ಮತ್ತು ತಂತ್ರಜ್ಞಾನದ ಅಗತ್ಯವನ್ನು ನಿರೀಕ್ಷಿಸುತ್ತದೆ.

– ಅನಿಲ್‌ಶರ್ಮ, ವ್ಯಾಪಾರ ತಜ್ಞ




ಮುಕ್ತ ಮಾರುಕಟ್ಟೆ ಒಪ್ಪಂದಗಳು ಕುರಿತು ಮಾಡಿಕೊಂಡ ಹಿಂದಿನ ಒಪ್ಪಂದಗಳು ಒಳ್ಳೆಯದಾಗಿಲ್ಲದ ಕಾರಣ ದುರ್ಬಲ ಸಮಾಲೋಚನೆ ಮತ್ತು ಅನುಷ್ಟಾನಗಳು ಕಾರಣವಾಗಿವೆ.

– ಅಮಿತಾ ಬಾಟೀಯಾ, ಅಸಿಸ್ಟೆಂಟ್ ಪ್ರೊಫೆಸರ್ ಆಫ್ ಎಕನಾಮಿಕ್ಸ್, ಜೆ.ಎನ್.ಯು.




ಪುಟ 3




ಸಮಸ್ತ ಗ್ರೀನ್ ಪವರ್ ಪತ್ರಿಕೆ ಓದುಗರಿಗೆ, ಹಿತೈಷಿಗಳಿಗೆ ಹೊಸ ವರ್ಷದ ಹಾರ್ದಿಕ ಶುಭಾಶಯಗಳು

## ಭಾರತದಲ್ಲಿ ಬಹುಔಷಧಿ ನಿರೋಧಿಸಿ ಹಬ್ಬುವ ಕ್ಷಯರೋಗ ಅತ್ಯಂತ ಹೆಚ್ಚಿದೆ

2019ರಲ್ಲಿ ಇಂಡಿಯಾದ ವಾರ್ಷಿಕ ಕ್ಷಯರೋಗ ವರದಿ ಪ್ರಕಾರ 2018ರಲ್ಲಿ ಭಾರತದಲ್ಲಿ 21.5 ಮಿಲಿಯನ್ ಕ್ಷಯರೋಗ ಪೀಡಿತರು ಇದ್ದಾ ರೆಂದು ದಾಖಲಿಸಿದೆ. ಇದು ಅದರ ಹಿಂದಿನ ವರ್ಷಕ್ಕಿಂತ ಶೇಕಡ 17ರಷ್ಟು ಹೆಚ್ಚಿದೆ ಎಂದೂ ಹೇಳಿವೆ. ಉತ್ತರಪ್ರದೇಶ ಅತ್ಯಂತ ಹೆಚ್ಚು ಶೇ20 ರಷ್ಟು, ಮಹಾರಾಷ್ಟ್ರದಲ್ಲಿ ಶೇ10ರಷ್ಟು, ರಾಜಸ್ಥಾನದಲ್ಲಿ ಶೇ7ರಷ್ಟು, ಕ್ಷಯ ರೋಗಿ ಗಳನ್ನು ಗುರುತಿಸಲಾಗಿದೆ.

ಹೆಚ್.ಐ.ವಿ ಪೀಡಿತರಲ್ಲಿ ಅತ್ಯಂತ ಹೆಚ್ಚು ಕ್ಷಯ ಪೀಡಿತ ರಾಗಿರುವುದು



ದೃಢ ಪಟ್ಟಿದೆ. 2017ರಲ್ಲಿ 43253 ರಷ್ಟಿದ್ದು ಅದರ ಮರು ವರ್ಷವೇ ಇದು 50000 ದಾಟಿದೆ ಎಂದು ತಿಳಿಸಿದೆ. ಇದರ ಜೊತೆಗೆ ಸರಿ ಸುಮಾರು 0.5ಮಿಲಿಯನ್ ಕ್ಷಯ ರೋಗಿಗಳಲ್ಲಿ ಮಧುಮೇಹ ಪೀಡಿತ ರಾಗಿದ್ದಾರೆ ಎಂದು ಪತ್ತೆ ಹಚ್ಚಲಾಗಿದೆ.

ಪುಟ 2

## ಮೈಸೂರಿನಲ್ಲೊಂದು "ಹಂಗಿಲ್ಲದ ಅರಮನೆ"

ವಿದ್ಯುತ್‌ಚ್ಛಕ್ತಿ ಉತ್ಪಾದನೆಗಾಗಿ ಅಳವಡಿಸಿರುವ ಸೋಲಾರ್ ಪ್ಯಾನಲ್





ಆಧುನಿಕ ಜೀವನ ಶೈಲಿ ಮೈಗೂಡಿಸಿಕೊಂಡಂತೆ ನಮ್ಮ ಬದುಕಿನ ಪರಿಸರದಲ್ಲಿ ಅಗಾಧವಾದ ಬದಲಾವಣೆಗಳು ಉಂಟಾಗಿ ಬಿಡುತ್ತಿವೆ. ಆಧುನಿಕತೆ–ಅಭಿವೃದ್ಧಿ ಇವುಗಳು ನಿಸರ್ಗದ ಸಹಚರ್ಯೆಯಿಂದ ದೂರವಿದ್ದು ಬಿಡುತ್ತವೆ. ನಿಸರ್ಗದ ಶಕ್ತಿ ಮೂಲಗಳಾದ ಮಣ್ಣು, ನೀರು, ವಾಯು ಎಲ್ಲವುಗಳಿಂದ ಪ್ರತ್ಯೇಕವಾಗಿ ಬದುಕುವ ಹಂಬಲ ನಮಗೆ ಹೆಚ್ಚಾಗಿ ಬಿಡುತ್ತದೆ. ಉದಾ: ಹವಾನಿಯಂತ್ರಿತ ರೂಮು, ಆಕ್ಸಿಜನ್ ಬಾರು, ಪಾದಗಳಿಗೆ ಮಣ್ಣೇ ಸೋಂಕದಂಗೆ ಕಾಂಕ್ರೀಟು ಹಾಕಿಸುವುದು, ಇಲ್ಲವೆ ದುಬಾರಿ ಗ್ರಾನೈಟುಗಳು, ಕೃತಕ ಬೆಳಕು ನೀಡುವ ಲೈಟು ಇತ್ಯಾದಿಗಳ ಮಾನವ ನಿರ್ಮಿತ ತಂತ್ರಗಳ ನೆರಳಿನಲ್ಲಿ ಬದುಕುವ ಜೀವನ ಶೈಲಿ ರೂಪಿತವಾಗಿ ಬಿಡುತ್ತದೆ. ಇದಕ್ಕೆ ತಕ್ಕಂತೆ ನಮ್ಮ ಮನೆಗಳ ವಿನ್ಯಾಸವೂ ಇರುತ್ತದೆ.

ಆದರೆ ಮೈಸೂರು ನಗರದಲ್ಲಿ ಯುವ ಉದ್ಯಮಿಯಾಗಿರುವ ಫಿನಿಕ್ಸ್ ಗ್ರೂಪಿನ ಇಂಜಿನಿಯರ್ ಆದ ಕಾಂತರಾಜು ಅವರ ಮನೆಯಲ್ಲಿ ನಿಸರ್ಗದ ಮೂಲಗಳಾದ ಮಳೆ ನೀರು,ಕೈತೋಟ, ವರ್ಟಿಕಲ್ ಗಾರ್ಡನ್, ಹಸಿರು ಹೊದಿಕೆ, ರಾಸಾಯನಿಕ ಮುಕ್ತ ಹಣ್ಣು ತರಕಾರಿಗಳನ್ನು ಕೂಡ ಬೆಳೆದುಕೊಳ್ಳುವ ಅವಕಾಶಗಳನ್ನು ತಮ್ಮ ಮನೆಯ ಮೂಲೆಮೂಲೆಗಳಲ್ಲಿ ಸೃಷ್ಟಿಸಿಕೊಂಡಿರುವುದು ಖುಷಿ ನೀಡುತ್ತದೆ.

ಆಧುನಿಕ ಕೃಷಿ ಪದ್ಧತಿಯಿಂದ ಎಲ್ಲಾ ದವಸ ಧಾನ್ಯಗಳು, ಸೊಪ್ಪು ತರಕಾರಿಗಳೂ ಅಷ್ಟೇ ಏಕೆ ಕುಡಿಯುವ ನೀರೂ ಕೂಡ ಮಲಿನಗೊಂಡಿವೆ. ಇವುಗಳಿಂದ ಒಂದಷ್ಟು ದೂರವಾಗಿ ಮಾಲಿನ್ಯ ರಹಿತ ಮಳೆ ನೀರಿನ ಸದ್ಬಳಕೆ, ಮನೆ ಅಂಗಳದಲ್ಲಿ ಮತ್ತು ತಾರಸಿಗಳಲ್ಲಿ ಮನೆಯ ದಿನ ನಿತ್ಯದ ಅಗತ್ಯಗಳಿಗೆ ಒಂದಷ್ಟು ಬಗೆಯ ಸೊಪ್ಪು,

ಪುಟ 6

## ತಿಂಗಳ ನೋಟ




"Man is the most insane species. He worships an invisible God and destroys a visible Nature. Unaware that this Nature he's destroying is this God he's worshiping."

~ Hubert Reeves

Canadian-French astrophysicist


# ಗ್ರೀನ್ ಪವರ್

ನಿರ್ಭಯ, ನಿರಂತರ ಪರಿಸರ ಪ್ರಿಯರ ತಿಂಗಳ ಪತ್ರಿಕೆ

**ಮೈಸೂರು ಜನವರಿ 10, 2020**

**ಸಂಪಾದಕರು :**
ರಾಜು ಬಿ. ಕನ್ನಲಿ

**ಸಲಹಾ ಮಂಡಳಿ :**
ಬಿ.ಎಸ್. ಸೋಮಶೇಖರ
ಪ್ರಕಾಶ್ ಬಾಬು
ಡಾ. ತುಕಾರಾಮ್ ಎಸ್.
ಡಾ. ಎಲ್. ಪ್ರಸನ್ನಕುಮಾರ್

**ವಿನ್ಯಾಸ :**
ಎಂ.ವಿ. ಕಲ್ಪ

**ಛಾಯಾಚಿತ್ರ :**
ಮಹೇಶ್‌ಕಲ್ಯಾಣ್

**ಚಂದಾ ವಿವರ :**
ಬಿಡಿ ಪ್ರತಿ : ₹ 10.00
ವಾರ್ಷಿಕ : ₹ 110.00
ಐದು ವರ್ಷಕ್ಕೆ : ₹ 550.00

ಡಿ.ಡಿ. ಮತ್ತು ಚೆಕ್‌ಗಳನ್ನು ಕೆಳಕಂಡ 'ಗ್ರಾಮೀಣ ಪ್ರಕಾಶನ' ಹೆಸರಿಗೆ ಕಳುಹಿಸಿಕೊಡಿ



← ನಮ್ಮ ವಿಳಾಸ

**'ಗ್ರಾಮೀಣ ಪ್ರಕಾಶನ'**
"ದೇವೀರಿ" # 1925, ಬೋಗಾದಿ 2ನೇ ಹಂತ
ಅಮೃತ ವಿದ್ಯಾಪೀಠ ರಸ್ತೆ, ಮೈಸೂರು – 26
Ph: 8762771148
e-mail : rajub55@yahoo.com, grameenamys@gmail.com


## ಮುಂದಿನ ಸಂಚಿಕೆಯಲ್ಲಿ

**ಪರಿಸರದೊಂದಿಗೆ ನನ್ನ ಪ್ರಯೋಗಗಳು**

**ಹವಾಮಾನ ಬದಲಾವಣೆಯಲ್ಲಿ ಗಾಂಧೀಜಿ ಚಿಂತನೆಗಳ ಪ್ರಸ್ತುತತೆ**



### ಲೇಖನಗಳಿಗೆ ಆಹ್ವಾನ

ಚಿಕ್ಕ, ಚೊಕ್ಕ ಲೇಖನಗಳನ್ನು ಸೂಕ್ತ ಛಾಯಾಚಿತ್ರದೊಂದಿಗೆ e-mail : rajub55@yahoo.com ಅಥವಾ greenpower.monthly@gmail.com ಕಳುಹಿಸಬಹುದು.

## ಸಂಪಾದಕೀಯ



ರಾಜು ಬಿ. ಕನ್ನಲಿ
ಮೊ. 8762771148

ಹಳ್ಳಿ ಜೀವನದ ಬದುಕು ಒಂದು ರೀತಿಯಲ್ಲಿ 'ನಿರುದ್ವಿಗ್ನ'ವಾದುದ್ದು ಎಂದು ಅರ್ಥವಾಗಲು ಬಹಳ ವರ್ಷವೇ ಬೇಕಾದವು. ಆದರೆ ನಗರ ಜೀವನದ ಏಕತಾನತೆಯು ಉಂಟುಮಾಡಿದ ಋಣಾತ್ಮಕ ಪರಿಣಾಮದಿಂದಾಗಿ ಆಗಾಗ್ಗೆ ಹಳ್ಳಿಗಾಡು, ಗುಡ್ಡಗಾಡು, ಕರಾವಳಿ ಪ್ರದೇಶಗಳ ಪ್ರವಾಸದ ಹವ್ಯಾಸ ಮೈಗೂಡಿಸಿಕೊಂಡಾಗ ಮೈಮನಸ್ಸುಗಳೆರಡೂ ಹಗುರವಾದವು. ನಿಸರ್ಗದ ನೈಜತೆಯ ಅನುಭವವನ್ನು ಇತ್ತೀಚೆಗೆ ಅನುಭವಿಸಿದ್ದು ಅಕ್ಟೋಬರ್ 27,2019ರಂದು ಬಿಳಿಗಿರಿರಂಗ ಬೆಟ್ಟದವಾಸಿ, ಕಾಡಿನ ಮೇಧಾವಿ ಬಂಗ್ಲೆ ಪೋಡಿನ ನಿವಾಸಿ ರಾಮೇಗೌಡನ ಅರಣ್ಯ ನರ್ಸರಿಗೆ ಭೇಟಿ ನೀಡಿದಾಗ ಎನ್ನಬಹುದು.

ಪುರಾಣ ಪ್ರಸಿದ್ಧ ಬಿಳಿಗಿರಿರಂಗನ ಬೆಟ್ಟದ ಕಿಬ್ಬರಿಯಲ್ಲಿ ದಟ್ಟ ವನ್ಯಸಿರಿರಾಶಿಗಳ ನಡುವೆ ಒಂದಾಗಿ ಸದ್ದಿಲ್ಲದ ಹಸಿರು ಕ್ರಾಂತಿಗೆ ಮುನ್ನುಡಿ ಬರೆಯುತ್ತಿರುವ ಬಂಗ್ಲೆ ಪೋಡು ಹಾಡಿಯ ರಾಮೇಗೌಡನ ನಿಸ್ವಾರ್ಥಕಾಯಕ ನಮ್ಮನ್ನು ಬೆರಗುಗೊಳಿಸಿತು. ಬೆಟ್ಟದ ಹೆದ್ದಾರಿಯ ಪಕ್ಕದಲ್ಲೇ ಇರುವ **'ಶ್ರೀ ಜಡೆರುದ್ರಸ್ವಾಮಿ ನರ್ಸರಿ'** ಅರಣ್ಯಾಸಕ್ತರಿಗೆ ಮಾತ್ರ ಗೋಚರಿಸುವಂತದ್ದು. ಚಿಕ್ಕ ತಗಡಿನ ಮೇಲೆ ನರ್ಸರಿ ಹೆಸರಿದೆ. ಅರಣ್ಯಗಳಲ್ಲಿರುವ ಮರಗಳ ಬುಡದಲ್ಲೇ ಗೊಂಡಾರ್‍ಯಣದಲ್ಲಿನ ಅನೇಕ ಅಪರೂಪದ ಗಿಡಗಳು ರಾಮೇಗೌಡನ ನರ್ಸರಿಯಲ್ಲಿ ಒಂದುಎರಡಾಗಿ ಎರಡು ನಾಲ್ಕಾಗಿ ನೂರಾರು ಸಸಿಗಳ ಸಂತತಿಯೇ ಅಲ್ಲಿ ವೃದ್ಧಿಗೊಳ್ಳುತ್ತಿದೆ.

ಮೌನವನ್ನೇ ಮಲಗಿಸಿ ಬಿಡುವಂತಿದ್ದ ಅಲ್ಲಿನ ಮೌನಕ್ಕೆ ನಮ್ಮ ನಗರದ ಶಬ್ಧಮಾಲಿನ್ಯಕ್ಕೆ ಹೊಂದಿಕೊಂಡಿದ್ದ ಮನಸ್ಸು ಸಹಜ ಸ್ಥಿತಿಗೆ ಬಂದು ವನಸಿರಿಯ ಶಾಂತತೆಯನ್ನು ಆಸ್ವಾದಿಸಲು ಸ್ವಲ್ಪ ಸಮಯವೇ ಹಿಡಿಯಿತು.

ಕಾಯಕ ಯೋಗಿಯ ನಿಷ್ಕಾಮಕರ್ಮ ಕಂಡು ಮಾತುಬಾರದಾಯಿತು. ಅರಣ್ಯ ಸಸ್ಯಗಳನ್ನು ಕಾಪಾಡುವ ಈ ಕಾಯಕಕ್ಕೆ ನಿನಗೆ ಪ್ರೇರಣೆ ನೀಡಿದ್ದು ಯಾರಪ್ಪಾ ಅಂದ್ರೆ. ಯಾರು ಇಲ್ಲ ಸಾಹೇಬ್ರೆ. ನಾನೇ ಚಿಕ್ಕಂದಿನಿಂದ ಮಾಡಿಕೊಂಡು ಬಂದಿದ್ದು ಎನ್ನುವ ಆತನ ಮಾತು ಅರಗಿಸಿಕೊಳ್ಳಲು ಕಷ್ಟವಾಯಿತು. ಹೊರ ನಾಗರಿಕ ಜಗತ್ತಿನ ಬಗ್ಗೆ ಒಂದು ರೀತಿಯ ಉದಾಸಿನವೋ ಏನೋ ಅಥವಾ ಆತನನ್ನು ಇದುವರೆಗೂ ತನ್ನ ಮಗುವಿನಂತೆ ಕಾಪಾಡಿದ ನಿಸರ್ಗದ ಮಡಿಲಿನ ಬಗ್ಗೆ ಆತನಿಗಿರುವ ಅದ್ಯಮ ಕುತೋಹಲ, ಸಹಚರ್ಯೆಯೋ ಏನೋ ಆತ **'ಹಸಿರು ಸಮುದ್ರ'**ದಲ್ಲಿ ಒಂದಾಗಿ ಬದುಕು ಕಟ್ಟಿಕೊಂಡಿದ್ದಾನೆ.

ಬಿಡುವುಮಾಡಿಕೊಂಡು, ಇಲ್ಲವೆ ಋತುಮಾನಕ್ಕನುಗುಣವಾಗಿ ಮರಗಿಡಗಳ ಬೀಜ, ಬಳ್ಳಿ, ಗೆಡ್ಡೆಗಳನ್ನು ಸಂಗ್ರಹಿಸುವ ನಿಟ್ಟಿನಲ್ಲಿ ಅರಣ್ಯ ಹೊಕ್ಕು ಬರುತ್ತಿದ್ದ ಬಂಗ್ಲೆ ಪೋಡಿನ ರಾಮೇಗೌಡ ಇದುವರೆಗೂ ಸುಮಾರು 250–300ಕ್ಕೂ ಹೆಚ್ಚಿನ ಗಿಡಮರ ಬಳ್ಳಿಗಳ ಸಸಿಗಳನ್ನು ನರ್ಸರಿಯಲ್ಲಿ ಬೆಳೆಸುತ್ತಿದ್ದಾನೆ. ಅರಣ್ಯ ಇಲಾಖೆ ಮಾಡದ ಕೆಲಸವನ್ನು ರಾಮೇಗೌಡ ನಿರ್ವಹಿಸಿಕೊಂಡು ಬರುತ್ತಿದ್ದಾನೆ. ಹವ್ಯಾಸ ಇಂದು ವೃತ್ತಿಯಾಗಿದೆ. ಅದರೆ ಆತನಲ್ಲಿ ಹಣದ ದುರಾಸೆ ಇಲ್ಲ. ಬದುಕಿನ ಬಂಡಿ ಉರುಳಲು ಸಾಕಾಗುವಷ್ಟು ಹಣಸಿಕ್ಕರೆ ಆತ ಸಂತುಷ್ಟ.

ಬಾಯಿಂದ ಬಾಯಿಗೆ ಈತನ ಕಾಯಕ ಪರಿಚಯವಾಗಿ ಅನೇಕ ಪರಿಸರಾಸ್ತಕರು ಈತನ ನರ್ಸರಿಗೆ ಭೇಟಿ ನೀಡಿ ಗಿಡಗಳನ್ನುಕೊಳ್ಳುತ್ತಾರೆ. ಪ್ರಸನ್ನಗೌಡ ಎಂಬ ಉದ್ಯಮಿ ತನ್ನ ಒಂದೂವರೆ ಎಕರೆ ಭೂಮಿಯಲ್ಲಿ ಅರಣ್ಯ ಸಸಿಗಳನ್ನು ಬೆಳೆಸಬೇಕು ಎಂದಿದ್ದರಿಂದ ರಾಮೇಗೌಡನನ್ನು ಹುಡುಕಿ ಹೋಗಿದ್ದೆವು.ಈ ಕುರಿತ ವಿಶೇಷ ಲೇಖನ ಈ ಸಂಚಿಕೆಯಲ್ಲಿದೆ.

ಯುವ ಉದ್ಯಮಿ ಕಾಂತರಾಜು ಅವರು ನಿರ್ಮಿಸಿರುವ ನೂತನ ಮನೆ ವಿದ್ಯುತ್‌ಚಕ್ತಿ, ನೀರು, ಮಾಲಿನ್ಯ ಮುಕ್ತ ತರಕಾರಿ ಇತ್ಯಾದಿಗಳ ವಿಷಯದಲ್ಲಿ ಸ್ವಾವಲಂಬಿತನ ಕಂಡುಕೊಂಡಿರುವ ಲೇಖನ ಕೂಡ ಈ ಸಂಚಿಕೆಯಲ್ಲಿದೆ.

'ಗ್ರೀನ್ ಪವರ್' ಪತ್ರಿಕೆಯ ಉದ್ದೇಶ ಕೂಡ ನಾಡಿನ ಪರಿಸರಮಾಲಿನ್ಯ, ಪರಿಸರ ಸಂರಕ್ಷಣೆಗಿರುವ ಮಾರ್ಗೋಪಾಯಗಳನ್ನು ಕುರಿತು ಚರ್ಚಿಸುವ ಒಂದು ವೇದಿಕೆಯೇ ಆಗಿದೆ. ನಿಸರ್ಗದ ಸಂಪನ್ಮೂಲಗಳನ್ನು ಜತನದಿಂದ, ವಿವೇಚನೆಯಿಂದ ಬಳಸಿಕೊಂಡು ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸುವ ಬಗೆಯನ್ನು ಪತ್ರಿಕೆ ಪ್ರೋತ್ಸಾಹಿಸುತ್ತಿದೆ. ಈ ಕುರಿತಾದ ಕಿರುಲೇಖನಗಳಿಗೆ ಸ್ವಾಗತವಿದೆ. ವಿಶೇಷವಾಗಿ ಮೈಸೂರು ನಗರಕ್ಕೆ ಸಂಬಂಧಿಸಿದ ಇಂತಹ ಲೇಖನಗಳನ್ನು ಪತ್ರಿಕೆ ಆದ್ಯತೆಯ ಮೇಲೆ ಪ್ರಕಟಿಸಲಿದೆ.

**'21ನೇ ಶತಮಾನ ಮಾಲಿನ್ಯಯುಗ'** ಅಥವಾ **'ಕಾರ್ಬನ್ ಯುಗ'** ಎಂಬ ಮನವರಿಕೆಯಾಗುತ್ತಿದ್ದರೂ ಕೂಡ ನಿಸರ್ಗದ ಸಹಚರ್ಯೆಯೊಡನೆ ಬದುಕು ಕಟ್ಟಿಕೊಳ್ಳುತ್ತಾ ಭವಿಷ್ಯಕ್ಕಾಗಿ ಹಸಿರು ವಲಯವನ್ನು ಕಾಪಿಡುವ ದಿಕ್ಕಿನಲ್ಲಿ ಬಂಗ್ಲೆ ಪೋಡು ರಾಮೇಗೌಡನಂತಹ ನಿರ್ಮಲ ಮನಸ್ಸಿನ ವೆಕ್ತಿತ್ವಗಳು ದುಡಿಯುತ್ತಿರುವುದರಿಂದಲೇ ನಿರಾಸೆಯ ಸಮುದ್ರದಲ್ಲೂ ಅಲ್ಲಲ್ಲಿ ಆಶಾಕಿರಣದ ದೀಪಗಳು ಮಿನುಗುತ್ತಿರುತ್ತವೆ.

ನಂಬಿಕೆಯ ಸಾಗರದಲ್ಲಿ ಇಂದಿನ ಶತಮಾನದ ಬಹುದೊಡ್ಡ ಶತ್ರು ದೊಡ್ಡ ಶತ್ರು ಎಂದರೆ ಪ್ಲಾಸ್ಟಿಕ್ ಆಗಿದೆ. ಇದರ ವಿರಾಟ ಸ್ವರೂಪ ನಮ್ಮೆಲ್ಲರನ್ನು, ವಿಶ್ವವನ್ನು ಕಂಗೆಡಿಸುತ್ತಿದೆ. ಇದರ ಸೃಷ್ಟಿಕರ್ತರೂ ನಾವೆ, ಇದಿಲ್ಲದೆ ನಾವಿಲ್ಲ ಎಂದೂ ಆಗಿಬಿಟ್ಟಿದೆ. ಇದನ್ನು ಹಿಡಿದೇ ನಾವು ಮುಳುಗಿ ಹೋಗುತ್ತಿದ್ದೇವೆ.

ಇದೊಂದು ವಿಚಿತ್ರವಾದ ಸನ್ನಿವೇಶ. ಪ್ಲಾಸ್ಟಿಕ್ ಹಿಡಿತದಿಂದ ನಾವು ಹೊರ ಬರುವ ಯಾವ ಲಕ್ಷಣಗಳೂ ಕಾಣಿಸುತ್ತಿಲ್ಲ.




ನೀವು ಚಿತ್ರದಲ್ಲಿ ನೋಡುತ್ತಿರುವುದು ಸಮುದ್ರದಲ್ಲಿ ನಾನಾ ರಾಸಾಯನಿಕ ಪ್ರಕ್ರಿಯೆಗೆ ಒಳಗಾಗಿ ಸೃಷ್ಟಿಗೊಂಡ ಶಿಲೆ ಇದಾಗಿದೆ. ಮರಳು, ಕಲ್ಲು, ನಾನಾ ಬಗೆಯ ಚಿಪ್ಪುಗಳನ್ನುಳ್ಳ(ಶೆಲ್) ಮೀನಿನ ಹೊರ ಹೊದಿಕೆಗಳು, ಹವಳದ ಶೆಲ್ಲುಗಳು ಇತ್ಯಾದಿಗಳು ಸೇರಿ ಶಿಲೆಗಳಾಗುವುದು ಸಹಜ. ಇಂತಹ ದೊಡ್ಡ ಪ್ರಕ್ರಿಯೆಯಲ್ಲಿ ಹಡಗಿನಿಂದಲೋ ಅಥವಾ ಮೀನುಗಾರಿಕೆ ದೋಣಿಗಳಿಂದ ಬಿಸಾಡಲ್ಪಟ್ಟ ಪ್ಲಾಸ್ಟಿಕ್ ಹಗ್ಗ ಕೂಡ 'ಕಲ್ಲಿನೊಳಗೆ ಶಾಸ್ವತವಾಗಿ ಒಂದಾಗಿರುವ ಈ ಪ್ರಕ್ರಿಯೆ ಮುಂಬರುವ ಗಂಡಾಂತರದ ದಿನಗಳನ್ನು ಸೂಚಿಸುತ್ತಿದೆ. ಕಣಗಳಾಗಿ ಬಿಡುಗಡೆಗೊಂಡ ಪ್ಲಾಸ್ಟಿಕ್ ಕಣಗಳು ಜಲಚರಗಳಲ್ಲಿ ಒಂದಾಗಿ ಪುನಃ ಜಲಚರಗಳನ್ನು ಭಕ್ಷಿಸುವ ಮನುಷ್ಯರ ದೇಹದೊಳಕ್ಕು ಉಂಟುಮಾಡುತ್ತಿರುವ ದುಷ್ಪರಿಣಾಮಗಳು ನಮಗೆ ತಿಳಿದೇ ಇದೆ. ಆದರೂ ನಾವು ಮೈ ಮರೆತ್ತಿದ್ದೇವೆ. ಇಂತಹ ಸಣ್ಣ ಸಣ್ಣ ಸಂಗತಿಗಳು ಭವಿಷ್ಯದಲ್ಲಿ ಭೂಗೋಳದ ಅಸ್ತಿತ್ವವನ್ನು ಅಲುಗಾಡಿಸುವುದರಲ್ಲಿ ಅನುಮಾನವಿಲ್ಲ. ಪ್ರಾಥಮಿಕ ಹಂತದ ಶಿಕ್ಷಣದಲ್ಲೇ ಮಕ್ಕಳಲ್ಲಿ ಆರೋಗ್ಯ, ಪರಿಸರ ಸಂರಕ್ಷಣೆ, ಸಾಮಾಜಿಕ ವಿಜ್ಞಾನ ಇತ್ಯಾದಿಗಳ ಅರಿವು ಮೂಡಿಸುವ ಪ್ರಯತ್ನ ಆಗಬೇಕಿದೆ.

# ಭಾರತದಲ್ಲಿ ಬಹುಔಷಧಿ ನಿರೋಧಿಸಿ ಹಬ್ಬುವ ಕ್ಷಯರೋಗ ಅತ್ಯಂತ ಹೆಚ್ಚಿದೆ


>> **ಮೊದಲ ಪುಟದಿಂದ** <<


ಮಕ್ಕಳಲ್ಲಿ ಕ್ಷಯ ರೋಗ ಬಾಧೆಯು ಏರುಗತಿಯಲ್ಲೇ ಇದೆ. 2019ರ ವರದಿಯಂತೆ 1,33,059 ಮಕ್ಕಳು ಕ್ಷಯ ರೋಗ ಪೀಡಿತರಾಗಿರುವುದು ಕಂಡು ಬಂದಿದೆ.

ದೇಶದಲ್ಲಿ 26966 ರೋಗಿಗಳಲ್ಲಿನ ಕ್ಷಯ ರೋಗಾಣುಗಳು ಬಹು ಔಷಧಿಗಳನ್ನು ನಿರೋಧಿಸುವ ಸಾಮರ್ಥ್ಯವನ್ನು ಹೊಂದಿದೆ ಎನ್ನುವುದು ಆತಂಕಕಾರಿ ಸನ್ನೀವೇಶವೆಂದು ಅಭಿಪ್ರಾಯ ಪಟ್ಟಿದೆ. ಇದು ವಿಶ್ವದಲ್ಲೇ ದಾಖಲೆ ಪ್ರಮಾಣ ಎಂದಿದೆ.




ಕ್ಷಯರೋಗ ಗಾಳಿಯಿಂದ ಹರಡುತ್ತದೆ. ನಮ್ಮ ಪೌಷ್ಟಿಕಾಂಶದಕೊರತೆ, ವೈವಿಧ್ಯಮವಿಲ್ಲದ ಆಹಾರ ಪದ್ಧತಿ, ತರಕಾರಿ, ಸೊಪ್ಪು, ಹಣ್ಣು ಹಂಪಲಗಳನ್ನು ಸೇವಿಸದಿರುವುದು ಇತ್ಯಾದಿಗಳಿಂದ ದೇಹದಲ್ಲಿನ ರೋಗನಿರೋಧಕ ಶಕ್ತಿ ಕುಂಠಿತವಾದಾಗ ಗಾಳಿಯಲ್ಲಿನ ರೋಗಾಣುಗಳು ದೇಹವನ್ನು ಪ್ರವೇಶಿಸಿದಾಗ ಅಲ್ಲೇ ಉಳಿದು ರೋಗದ ಉತ್ತತ್ತಿಯನ್ನು ಮಾಡುತ್ತವೆ. ವಿಶೇಷವಾಗಿ ಮಕ್ಕಳಿಗೆ ಪ್ರಖ್ಯಾತ ಕಂಪನಿಗಳ ಸಿದ್ಧ ಆಹಾರ ನೀಡುವ ಬದಲು ಸೊಪ್ಪುಗಳು, ಕಾಳುಗಳು, ಹಣ್ಣು, ದೇಸೀ ಹಸುವಿನ ಹಾಲು, ಬೆಣ್ಣೆ ತುಪ್ಪ ಇತ್ಯಾದಿಗಳನ್ನು ಸೇವಿಸುವಂತೆ ನೋಡಿಕೊಳ್ಳುವುದರ ಮೂಲಕ ರೋಗ ನಿರೋಧಕ ಶಕ್ತಿ ಬೆಳೆಸಿಕೊಳ್ಳುವಂತೆ ಮಾಡುವುದೇ ಕ್ಷಯರೋಗವನ್ನು ದೂರವಿಡಲು ಇರುವ ದಾರಿ.






# ದೆಹಲಿಯಲ್ಲಿ 22 ಕುಂಬಾರಿಕೆ ಬೆಂಕಿಗೂಡುಗಳು ಸ್ತಬ್ಧ!

ವಿಶ್ವದಲ್ಲೇ ಭಾರತದ ರಾಜಧಾನಿ ವಾಯುಮಾಲಿನ್ಯದಲ್ಲಿ ಅತ್ಯಧಿಕವಾಗಿ ಬಳಲುತ್ತಿರುವ ನಗರವೆಂದು ಹೆಸರು ಮಾಡಿದೆ. 2018ರಲ್ಲಿ ಕೂಡ ಇದೇ ಪರಿಸ್ಥಿತಿ ಎದುರಾಗಿತ್ತು. 2019ರಲ್ಲಿ ಇದರ ಹಾವಳಿ ಇನ್ನೂ ಹೆಚ್ಚಿದೆ. ಇದಕ್ಕೆ ನೂರೆಂಟು ಕಾರಣಗಳು. ಬಸ್ಸು, ಲಾರಿ, ಸ್ಕೂಟರ್‌ಗಳು, ಕಾರುಗಳು ಉಗುಳುವ ಹೊಗೆ ಕಾರಣ. ಇನ್ನೂ ಕಾರ್ಖಾನೆಗಳು ಹೊರ ಹಾಕುವ ವಿಷಾನಿಲ ಕೇಳುವಂತೆಯೇ ಇಲ್ಲ. ಮತ್ತೊಂದೆಡೆ ದೆಹಲಿ ಸುತ್ತಲಿನ ರಾಜ್ಯಗಳಲ್ಲಿ ರೈತರು ಕೃಷಿ ಉಳಿಕೆಗಳಿಗೆ ಬೆಂಕಿಹಾಕುವುದರಿಂದ ಮತ್ತಷ್ಟು ಇಂಗಾಲದ ಡೈ ಆಕ್ಸೈಡ್ ಗಾಳಿಸೇರಿ ಉಸಿರಾಟದ ತೊಂದರೆ, ಹೃದಯ ತೊಂದರೆ ಅನುಭವಿಸುವಂತಾಗಿದೆ. ವೃದ್ಧರು, ಮಕ್ಕಳು ಪ್ರಾಣಾಪಾಯ ಎದುರಿಸುತ್ತಿದ್ದಾರೆ. ಜನರು ದೆಹಲಿ ಬಿಟ್ಟು ವಲಸೆ ಹೋಗುತ್ತಿದ್ದಾರೆ.

**700 ಕುಟುಂಬಗಳು ಕಂಗೆಟ್ಟಿವೆ**

ಆದರೆ ಕುಂಬಾರಿಕೆಯನ್ನ ನಂಬಿ ಬದುಕು ಕಟ್ಟಿಕೊಳ್ಳುತ್ತಿದ್ದ ಸೌದೆಚಾಲಿತ ಬೆಂಕಿ ಗೂಡುಗಳಲ್ಲಿ ಮಡಿಕೆ ಸುಡುವ ಮಂದಿ ದೆಹಲಿಯ ವಿವಿಧ ಬಡಾವಣೆ ಗಳಲ್ಲಿದ್ದು (ಕುಂಬಾರವೃತ್ತಿ ಯವರು). ತಮ್ಮ ಸೌದೆಚಾಲಿತ ಕುಂಬಾರಿಕೆ ಗೂಡುಗಳನ್ನು ಮುಚ್ಚಿ ಎಂಬ ಸರಕಾರದ ಆದೇಶದಿಂದ ಕಂಗೆಟ್ಟಿದೆ. ಹೊಗೆಯ ಕಾರಣಕ್ಕೆ ಹೊಟ್ಟೆ ಹೊರೆಯುವ ಕಸುಬಿಗೆ ಕರಿ ನೆರಳು ಚಾಚಿದೆ.



ಸರಿಸುಮಾರು 700 ಕುಟುಂಬಗಳು ಬೀದಿ ಪಾಲಾಗಲಿವೆ. ಸರಕಾರ ಇಂತಹ ಕಸುಬಿಗೆ ಬದಲಿ ಸೌಕರ್ಯ ಕಲ್ಪಿಸುವುದೇ?ಕಾಲವೇ ಉತ್ತರ ಹೇಳಬೇಕಿದೆ.

ಇಂತಹ ವೃತ್ತಿಗಳಲ್ಲಿನ ಉದ್ಯಮಿ ಜನರು ಪರಿಸರ ಸ್ನೇಹಿ ಸಲೀಕರಣೆಗಳನ್ನು ಬಳಸುವಂತೆ ಪ್ರೋತ್ಸಾಹಿಸಬೇಕಿದೆ. ಶಕ್ತಿ ಮೂಲಗಳಿಂದ ವೃತ್ತಿ ಮಾಡುವಂತೆ ಸರಕಾರ ಪ್ರೋತ್ಸಾಹ, ಸಹಾಯ ನೀಡಲೇ ಬೇಕಿದೆ. ಸಮಸ್ಯೆ ಎದುರಾ ದಾಗ ಅವರ ಮನೋ ಸ್ಥೈರ್ಯ ಕೆಡಿಸುವ ಬದಲು ಮುಂಚಿತವಾಗಿ ಮಹಾ ನಗರಗಳಲ್ಲಿ ರುವ ಇಂತಹ ಸಮಸ್ಯೆಗಳಿಗೆ ಪರಿಹಾರ ಕಂಡು ಕೊಳ್ಳಬೇಕಿದೆ. ದೆಹಲಿಯ ಸುತ್ತಲೂ ರಿಂಗ್(ವೃತ್ತ ರೈಲು ರಸ್ತೆ) ರೈಲು ಸಂಚಾರಿ ವ್ಯವಸ್ಥೆ ಕಲ್ಪಿಸಿ ಜನ ಸಾರ್ವಜನಿಕ ವಾಹನ ಉತ್ತೇಜಿಸಬೇಕಿದೆ. ಇಲ್ಲದೇ ಇದ್ದಲ್ಲಿ ದೆಹಲಿ (Dead City) ಸತ್ತನಗರವಾಗಲಿದೆ.

# ಆರ್.ಸಿ.ಇ.ಪಿ. ಮುಗಿಯಿತು. ಮುಂದೇನು? ಆರ್ಥಿಕ ಹಿಂಜರಿತದಿಂದ ಹೊರಬರುವ ಮಾರ್ಗವೇನು?




**ನಾವೀಗ ಮುಕ್ತ ಮಾರುಕಟ್ಟೆ ಬಗ್ಗೆ ಮಾತನಾಡುವಷ್ಟು ಬಲಾಢ್ಯರಲ್ಲ. ಏಕೆಂದರೆ ನಮ್ಮಲ್ಲಿನ ಉದ್ಯಮಿಗಳು ವಿದೇಶಿ ಉದ್ಯಮಗಳೊಂದಿಗೆ ಗುಣಮಟ್ಟದಲ್ಲಾಗಲಿ, ಬೆಲೆಯಲ್ಲಾಗಲಿ, ಸೆಣಸಾಡಿ ಗೆಲ್ಲುವಷ್ಟರ ಮಟ್ಟಿಗೆ ಬಲಿಷ್ಟವಾಗಿಲ್ಲ. ಕೃಷಿ ಹೊಟ್ಟೆಪಾಡಿಗೆ ಎನ್ನುವುದರಿಂದ ಹೊರಬಂದು ಯಶಸ್ವಿ ಉದ್ಯಮ ಎಂಬಂತಾಗಬೇಕಿದೆ. ದೇಶ ಯಾವುದೇ ಆಗಿರಲಿ, ಅಲ್ಲಿನ ಜನತೆ ಗುಣಮಟ್ಟದ, ನಂಬಿಕೆಗೆ ಅರ್ಹವಾದ, ದೀರ್ಘಕಾಲ ಬಾಳಿಕೆ ಬರುವ, ಸಮರ್ಥನೀಯ ಬೆಲೆಯುಳ್ಳ ಪದಾರ್ಥ ಗಳನ್ನು ಕೊಳ್ಳಲು ಬಯಸುತ್ತಾರೆಯೇ ವಿನಹ ರಾಷ್ಟ್ರ, ರಾಷ್ಟ್ರಪ್ರೇಮ ಇತ್ಯಾದಿಗಳ ಹೆಸರೆತ್ತಿ ಅವರನ್ನು ದಾರಿ ತಪ್ಪಿಸಲಾಗದು. ಸಮಸ್ಯೆಯ ಮೂಲವನ್ನು ಹುಡುಕಿ ನಿವಾರಿಸುವುದು ಮುಖ್ಯವಾಗುತ್ತದೆ. ಉತ್ಪಾದನಾ ವಲಯ, ಕೃಷಿ ವಲಯ ಉತ್ಪಾದನೆಗಳಲ್ಲಿನ ಗುಣಮಟ್ಟ, ಸ್ಪರ್ಧಾತ್ಮಕ ಬೆಲೆ, ಪ್ರಮಾಣ ಇತ್ಯಾದಿಗಳನ್ನು ಖಾತರಿಸಿಕೊಳ್ಳಬೇಕಿದೆ. ನಂತರ ಮುಕ್ತ ಮಾರುಕಟ್ಟೆ ಬಗ್ಗೆ ಚಿಂತಿಸಬೇಕಿದೆ. ಗಾಂಧೀಜಿಯವರ ಸ್ವದೇಶಿ ಜಾಗತೀಕರಣದ ಹಾವಳಿಗೆ ಉತ್ತರವಾಗಬಲ್ಲದು.**

ಆರ್.ಸಿ.ಇ.ಪಿ. ಇಂದ ಭಾರತ ಹೊರಬಂತು. ಇದಕ್ಕೆ ದೇಶವ್ಯಾಪಿ ನಡೆದ ಪ್ರತಿಭಟನೆ, ವಿರೋಧ, ಟೀಕೆ – ಟಿಪ್ಪಣಿಗಳು ಕಾರಣ ಎಂದು ವಿರೋಧಿಗಳು ತೃಪ್ತಿಪಡುತ್ತಿದ್ದಾರೆ. ಕೇಂದ್ರ ಸರಕಾರ ಬಹಳ ವಿವೇಚನೆಯಿಂದ ಚಿಂತಿಸಿ ಭಾರತದ ಹಿತಾಸಕ್ತಿ ಕಾಪಾಡಲು ಹೊರ ಬಂದೆವು ಎಂದು ಸಮರ್ಥಿಸಿಕೊಳ್ಳುತ್ತಿದೆ.

ಆದರೆ ಕೇಂದ್ರ ಸರಕಾರ ಮುಂದೇನು ಮಾಡಬೇಕು ಎಂಬ ಬಗ್ಗೆ ಚರ್ಚೆ ವಿರೋಧಿಗಳಿಂದ, ಚಿಂತಕರಿಂದ ಅಷ್ಟೇ ತೀವ್ರವಾಗಿ ಪ್ರಾರಂಭಗೊಂಡಂತಿಲ್ಲ.

ಭಾರತ, ಚೀನಾ ಮತ್ತು ಅಮೆರಿಕದಷ್ಟು ಬಲಾಢ್ಯವಾಗಿಲ್ಲ. ಎಲ್ಲವನ್ನು ಏಕಾಂಕಿಯಾಗಿ ನಿಂತು ಎದುರಿಸಬಲ್ಲೆ ಎನ್ನುವಂತಿಲ್ಲ. ಆದರೆ ಭಾರತದ ಬಗ್ಗೆ ವಿದೇಶಗಳಲ್ಲಿ ಈಗ ಅಭಿಪ್ರಾಯ ಬದಲಾಗಿದೆ ನಿಜ. ಆದರೆ ಆಂತರ್ಯದಲ್ಲಿ ಆರ್ಥಿಕ ಕ್ಷೇತ್ರ, ತಂತ್ರಜ್ಞಾನ ಕ್ಷೇತ್ರ ಮತ್ತು ರೂಪಿಸಿದ ಯೋಜನೆಗಳನ್ನು ಬಲಿಷ್ಠವಾಗಿ ಅನುಷ್ಠಾನಗೊಳಿ ಸುವಲ್ಲಿ ಬಹಳಷ್ಟು ಸಾಧಿಸಬೇಕಿದೆ. ಬಹುದೊಡ್ಡ ಪ್ರಜಾಪ್ರಭುತ್ವ ದೇಶ ಭಾರತದಲ್ಲಿ ಬಂದೂಕಿನ ನಳಿಕೆ ಗುರಿ ಹಿಡಿದು ಉತ್ಪಾದಿಸಿ ನೀಡಲು ಸಾಧ್ಯವಿಲ್ಲ. 200ಕ್ಕೂ ಹೆಚ್ಚಿನ ವರ್ಷದ ಸ್ವಾತಂತ್ರ್ಯವುಳ್ಳ ಬಲಿಷ್ಟ ಅಮೆರಿಕದಂತೆ ಭಂಡತನ, ಧಾಷ್ಟ್ಯತನ, ತಂತ್ರಜ್ಞಾನದ ಧಿಮಾಕಿನಿಂದ ಮಾತನಾಡುವಂತಿಲ್ಲ.

ಆದರೆ ದೇಶೀಯ ಮಾರುಕಟ್ಟೆ ಮತ್ತು ಉದ್ದಿಮೆಗಳನ್ನು ಬಲಪಡಿಸುವುದು ಮತ್ತು ವ್ಯಾಪಕಗೊಳಿಸುವುದರ ಮೂಲಕ ಆರ್ಥಿಕತೆಗೆ ಬಲ ನೀಡುವುದು ಯುಕ್ತವಾಗಿರುತ್ತದೆ. ಇದರಲ್ಲಿ ನಮಗೆ ಚೀನಾ ಉದಾಹರಣೆಯಾಗಿ ನಿಲ್ಲುತ್ತದೆ.

W.T.O. ನಂತರ R.C.E.P. ಬಹುದೊಡ್ಡ ವ್ಯಾಪಾರ ಒಪ್ಪಂದ. ಪ್ರಪಂಚದ ಅತಿದೊಡ್ಡ ಮುಕ್ತ ಮಾರುಕಟ್ಟೆ ಪ್ರದೇಶವನ್ನು ನಿರ್ಮಿಸು ವುದು ಇದರ ಉದ್ದೇಶ. ಕಳೆದ ಏಳು ವರ್ಷ ಗಳಿಂದ ಕನಿಷ್ಟ 28 ಬಾರಿ ಒಂದೆಡೆ ಸೇರಿ ಅಂತಿಮಗೊಳಿಸಲು ಶ್ರಮಿಸಲಾಗಿತ್ತು. ಆದರೆ ಬ್ಯಾಂಕಾಕ್‌ನಲ್ಲಿ ಪ್ರಧಾನಿ ಮೋದಿ **"ಭಾರತದ ಹಿತಾಸಕ್ತಿ ದೃಷ್ಟಿಯಿಂದ RCEP ನಿಯಮಗಳನ್ನು ಪರಾಮರ್ಶೆ ಮಾಡಲಾಯಿತು. ಅದರಲ್ಲಿ ಸಕಾರಾತ್ಮಕವಾದ ಉತ್ತರ ದೊರೆಯಲಿಲ್ಲ. ಗಾಂಧೀಜಿ ತತ್ತ್ವಗಳು ಮಾತ್ರವಲ್ಲ ನನ್ನ ಆತ್ಮಸಾಕ್ಷಿ ಸಹ ಈ ಒಕ್ಕೂಟವನ್ನು ಸೇರಲು ವಿರುದ್ಧವಿದೆ. ಹೀಗಾಗಿ ಸೇರಲಿಲ್ಲ"** ಹೇಳಿಕೆ ನೀಡಿ ಹೊರ ಬಂದರು. ಭಾರತ ಮುಂಚಿತವಾಗಿಯೇ ಇದ ರಿಂದ ಹೊರ ಬರುವ ಬುದ್ಧಿವಂತಿಕೆ ಮತ್ತು ಎದೆ ಗಾರಿಕೆ ತೋರಿಸಿದ್ದರೆ ವಿಶ್ವ ಸಮುದಾಯ ದಲ್ಲಿ ಭಾರತ ಮುಜುಗರದಿಂದ ಪಾರಾಗಬಹುದಿತ್ತು.

ಭಾರತ ಉತ್ಪಾದನಾ ವಲಯ ಮತ್ತು ಕೃಷಿ ವಲಯದಲ್ಲಿ ಸ್ಪರ್ಧಾತ್ಮಕತೆ ಉತ್ಪಾದನೆ ವಲಯ ಮುಟ್ಟಿಯೇ ಇಲ್ಲ. ನಮ್ಮ ಕೃಷಿ ವಲಯವಂತೂ ಬಹುವಾಗಿ ಸಣ್ಣ ಇಡುವಳಿದಾರರ ಸಮುಚ್ಛಯವೇ ಆಗಿದೆ. ಇದು ಬಹುಮುಖ್ಯವಾಗಿ ಆಹಾರ ಸುರಕ್ಷತೆ – ಭದ್ರತೆ ಮತ್ತು ಜೀವನೋಪಾಯಕ್ಕೆ ಮಾತ್ರ ಸೀಮಿತವಾಗಿದೆ. ಇದು ಕೂಡ ಸರಕಾರ ಕೊಡ ಮಾಡುವ ಚುನಾವಣೆ ದೃಷ್ಟಿಕೋನದಲ್ಲಿ ಜನರ ಮತಗಳಿಸುವ ಹುನ್ನಾರವಿದೆ. ಅಲ್ಪ ಮತ್ತು ಧೀರ್ಘಾವದಿ ಸಾಲ, ಸಾಲಮನ್ನಾ ಇತ್ಯಾದಿಗಳನ್ನು ನಂಬಿ ನಿಂತಿದೆ. ಕೃಷಿ ಒಂದು ರೀತಿಯಲ್ಲಿ ಪರಾವಲಂಬಿ ವಲಯ.

ಇನ್ನು ಉತ್ಪಾದನಾ ವಲಯ ಇದಕ್ಕಿಂತ ಭಿನ್ನವಾಗೇನೂ ಇಲ್ಲ. ಬಹುತೇಕ ಕಾರ್ಖಾನೆಗಳು ಅನಾರೋಗ್ಯಕ್ಕೊಳಗಾದವು. Sick Industryಗಳು ಉತ್ಪಾದನಾ ಗುಣಮಟ್ಟವು ದೇಸೀ ಗ್ರಾಹಕರ ಮನಗೆದ್ದಿಲ್ಲ. ಸರಕಾರಗಳ ಉತ್ತೇಜನವೂ ದುರ್ಬಲ. ಭ್ರಷ್ಟಾಚಾರ, ಯುವ ಉದ್ಯಮಿಗಳು ದೇಶಬಿಟ್ಟು ವಿದೇಶಗಳಿಗೆ ಪಲಾಯನ ಮಾಡುತ್ತಿದ್ದಾರೆ. ಅತ್ಯುತ್ತಮ ವೈದ್ಯರು, ಎಂಜಿನಿಯರುಗಳು, ವಿಜ್ಞಾನಿಗಳೆಂದು ಹೆಸರು ಮಾಡಿರುವವರೆಲ್ಲಾ ವಿದೇಶದಲ್ಲಿದ್ದಾರೆ. ಅವರೆಲ್ಲಾ ಭಾರತದಿಂದ ಪ್ರೋತ್ಸಾಹ ಸಿಗದೆ ವಿದೇಶದಲ್ಲಿ ಹೋಗಿ ಮಿಂಚುತ್ತಿರುವವರು.

ಇಂತಹ ಸನ್ನಿವೇಶದಲ್ಲಿರುವ ಉತ್ಪಾದನಾ ವಲಯ ಮತ್ತು ಕೃಷಿ ವಲಯ ವಿದೇಶಿ ಪೈಪೋಟಿಯನ್ನು ಹೇಗೆ ತಾನೇ ಎದುರಿಸಲು ಸಾಧ್ಯ. ಅತ್ಯಂತ ಕನಿಷ್ಟ ಬೆಲೆಯ ಚೀನಾ ದೇಶದ ವಸ್ತುಗಳನ್ನು ಕೊಳ್ಳಲು ಅಮೆರಿಕನ್ನರೇ ಮುಗಿ ಬೀಳುವಾಗ ಭಾರತೀಯರನ್ನು ತಡೆಹಿಡಿಯಲಾದೀತೆ.

ಪ್ರಧಾನಿ ಘೋಷಣೆ ಮಾಡಿದ Make in India ಘೋಷಣೆಯಾಗಿಯೇ ಉಳಿದಿದೆ. ಯಾವ ಬಿಜೆಪಿ ರಾಜಕಾರಣಿಗಳು ಬಿಜೆಪಿ ಆಡಳಿತ ಇರುವ ರಾಜ್ಯಗಳೂ ಇದನ್ನು ಸೂಕ್ತವಾಗಿ ಅನುಷ್ಠಾನಗೊಳಿಸುವ ಎದೆಗಾರಿಕೆ, ಪ್ರಮಾಣಿಕತೆ, ದಕ್ಷತೆ ತೋರಲಿಲ್ಲ.

ಸ್ವದೇಶಿತನದ ಬಗ್ಗೆ ದೇಶೀ ಉದ್ಯಮಿಗಳ ಬಗ್ಗೆ, ಗ್ರಾಮ ಸ್ವರಾಜ್ಯಗಳ ಬಗ್ಗೆ ಸದಾ ಕನವರಿಸುತ್ತಿದ್ದ ಗಾಂಧೀಜಿ ಅವರ ಆರ್ಥಿಕ ಚಿಂತನೆಗಳು, ಜಾಗತೀಕರಣವನ್ನು ಭಾರತ ಎದುರಿಸಿ ನಿಲ್ಲಲು ದಾರಿದೀಪವಾಗುತ್ತದೆ. ಈ ಬಗ್ಗೆ ಕೇಂದ್ರ ಸರಕಾರ ಎಚ್ಚರಿಕೆಯಿಂದ ಆಂತರಿಕ ಆರ್ಥಿಕತೆ ಗ್ರಾಮ ಕುಟುಂಬದ ಆರ್ಥಿಕತೆಯಿಂದ ಆರಂಭವಾಗಬೇಕಿದೆ ಎಂಬುದನ್ನು ಮನನಗೊಂಡು ಕಾರ್ಯೋನ್ಮುಖವಾಗಕಿಬೇದೆ.



## ಕೊಡಗು ಭೂ ಕುಸಿತ – ಇತಿಹಾಸದಿಂದ ಆಡಳಿತ ವ್ಯವಸ್ಥೆ ಪಾಠ ಕಲಿತಿಲ್ಲ

ಕೊಡಗಿನಲ್ಲಿ ಭೂ ಕುಸಿತ ಉಂಟಾಗಿ ಹಲವಾರು ತಿಂಗಳು ಕಳೆದಿವೆ. ಪುನರ್ವಸತಿ ಆಗಿಲ್ಲ. ಗಂಜಿಕೇಂದ್ರದಲ್ಲಿರುವವರಿಗೆ ಒಂದಷ್ಟು ಹಣ ನೀಡಿ ಬಾಯಿ ಮುಚ್ಚಿಸಿದ್ದಾರೆ. ಭೂ ಕುಸಿತ ಮರುಕಳಿಸದಂತೆ ಮುಂದಿನ ಕ್ರಮ ಕೈಗೊಳ್ಳುವ ಯಾವ ಪ್ರಯತ್ನವೂ ನಡೆಯುತ್ತಿಲ್ಲ. ಮಡಿಕೇರಿಯ ತಲಕಾವೇರಿಯಲ್ಲಿ ಕೂರ್ಗ್ ವಿಲೇಜ್ ನಿರ್ಮಿಸುವ ಅವಿವೇಕದ ಕ್ರಮಕ್ಕೆ ಆಡಳಿತ ಮುಂದಾಗಿದೆ. ಸ್ಥಳೀಯವಲ್ಲದ ಗಿಡಗಳನ್ನು ನೆಡುವ ಪ್ರಯತ್ನ ನಡೆದಿವೆ. ಭೂ ಕುಸಿತ ತಡೆಯಲು ಆಫ್ರಿಕಾ ದೇಶದಲ್ಲಿ ಬಿದಿರು ಸಸಿಗಳನ್ನು ಇಳಿಜಾರಿನಲ್ಲಿ ಬೆಳೆಸಿ ಭೂ ಕುಸಿತ ತಡೆಯುವಲ್ಲಿ ಯಶಸ್ವಿಯಾಗಿದೆ. ಇಂತಹ ಸುಸ್ಥಿರ ಪ್ರಯತ್ನಗಳನ್ನು ಸರಕಾರ ಈ ವೇಳೆಗಾಗಲೇ ಕೈಗೊಳ್ಳಬೇಕಾಗಿದೆ. ಮುಂದಾದರು ಇಂತಹ ಪ್ರಯತ್ನ ನಡೆಯಲು ಸಾರ್ವಜನಿಕರು ದನಿ ಎತ್ತಲಿ.





## 'ಕಾಡಿನ ಮೇಧಾವಿ'

# ಬಂಗ್ಲೆ ಪೋಡು ಹಾಡಿಯ ರಾಮೇಗೌಡ

>> ಮೊದಲ ಪುಟದಿಂದ <<

ಆಗಾಗ್ಗೆ ಕೆಲವುಗಿಡ, ಮರ, ಬಳ್ಳಿಗಳ ಗಿಡಗಳನ್ನು ತೋರಿಸಿ ಇವು ಕಾಡಿನ ಗಿಡಗಳು ಎಂದಷ್ಟೇ ಹೇಳುತ್ತಿದ್ದನ್ನು ಕೇಳಿ ಯಾಕೆ ಅವುಗಳನ್ನು ನರ್ಸರಿ ಮಾಡಿರುವೆ ಎಂದಾಗ ಯಲ್ಲಪ್ಪ ರೆಡ್ಡಿ ಸಾರು ಹೇಳಿದ್ರು ಅವುಗಳ ಗಿಡಗಳನ್ನೂ ನರ್ಸರಿ ಮಾಡು ಎಂದಿದ್ದಾರೆಂದು ತಿಳಿಸಿದ. ನಾನು ಮತ್ತು ಪ್ರಸನ್ನ ಗೌಡ್ರು ಡಾ.ಯಲ್ಲಪ್ಪರೆಡ್ಡಿ ಅವರೊಂದಿಗೆ ಅರಣ್ಯನಾಶ ಮತ್ತು ಸಾಮಾಜಿಕ ಅರಣ್ಯ ಬೆಳೆಸುವುದರ ಬಗ್ಗೆ ಅನೇಕ ಬಾರಿ ಚರ್ಚೆ ನಡೆಸಿದ್ದೇವೆ. ಸಾಮಾಜಿಕ ಅರಣ್ಯಗಳ ಏಕತಾನತೆ ಹಾಗೂ ಅವುಗಳ ನಿರ್ವಹಣೆಯಲ್ಲಿನ ಅವೈಜ್ಞಾನಿಕತೆ, ದುರ್ಬಳಕೆ ಇತ್ಯಾದಿಗಳನ್ನು ಪ್ರಸ್ತಾಪಿಸಿದಾಗ ಅವರು ಸಹಜ ಅರಣ್ಯ ಮನುಷ್ಯರಿಂದ ನಿರ್ಮಿತವಾಗುವುದು ಸಾಧ್ಯವಿಲ್ಲ. ಆದರೆ ಒಂದಷ್ಟು ಜಾತಿಯ ಕಾಡುಮರ, ಗಿಡ, ಬೆಳ್ಳವರ್ಗೀಯ ಜಾತಿಗಳನ್ನು ಗುರುತಿಸಿ ಅವುಗಳನ್ನು ಸೂಕ್ತ ಅಂತರದಲ್ಲಿ ನಿರ್ಧಿಷ್ಟ ಜಾಗದಲ್ಲಿ ನೆಟ್ಟು ಕಾಪಾಡುತ್ತಾ ಹೋದಲ್ಲಿ ಒಂದೆರಡು ದಶಕಗಳಲ್ಲಿ ನಿಸರ್ಗ ತನ್ನಷ್ಟಕ್ಕೆ ತಾನೇ ಕೆಲವು ಮಾರ್ಪಾಡುಗಳನ್ನು ಮಾಡಿಕೊಂಡು ಅರಣ್ಯ ಸೃಷ್ಟಿಗೆ ಪ್ರಯತ್ನ ನಡೆಯುತ್ತದೆ ಎಂದು ತಿಳಿಸಿದ್ದು ನೆನಪಾಯಿತು.

ಈ ಪ್ರಯತ್ನಕ್ಕೆ ಇಂಬು ನೀಡುವಂತ್ತಿತ್ತು ಬಂಗ್ಲೆ ಪೋಡಿನ ಹಾಡಿಯ ರಾಮೇಗೌಡನ ಕಾಯಕ. ಡಾ.ಯಲ್ಲಪ್ಪ ರೆಡ್ಡಿ ಒಬ್ಬ ದಕ್ಷ, ಪ್ರಮಾಣಿಕ ಅಧಿಕಾರಿ ಮಾತ್ರವಲ್ಲ ಒಬ್ಬ ನಿಸರ್ಗ ಪ್ರೇಮಿ. ಇವರು ಶುದ್ಧ ಅರಣ್ಯಗಳಲ್ಲಿನ ಅಸಂಖ್ಯಾತ ಸಸ್ಯ ಪ್ರಬೇಧಗಳನ್ನು ಕಾಪಿಡುವ ಪ್ರಯತ್ನವಾಗಿ ಇಂತಹ ಮೇಧಾವಿಗಳಿಗೆ ಪ್ರೋತ್ಸಾಹ ನೀಡುತ್ತಿರುವುದು ನಿಜಕ್ಕೂ ಶ್ಲಾಘನೀಯ.

ಇಂತಹದೇ ಪ್ರಯತ್ನ ಕುಶಾಲನಗರದ ಬಳಿ ಇರುವ ಟಿಬೇಟಿಯನ್ ಕಾಲೋನಿ ಬಳಿ 100ಎಕರೆಗೂ ಹೆಚ್ಚು ಪ್ರದೇಶದಲ್ಲಿ ಅರಣ್ಯ ಬೆಳೆಸುವ ಯೋಜನೆಗೆ ಕಳೆದ ಎಂಟು ವರ್ಷಗಳ ಹಿಂದೆ ಅಡಿಗಲ್ಲು ಹಾಕಿದ್ದು ನಮ್ಮ ನೆನಪಿನಾಳದಲ್ಲಿದೆ. ಕಳೆದೆರಡು ತಿಂಗಳ ಹಿಂದೆ ಅದನ್ನು ನೋಡಿದಾಗ ಡಾ.ಯಲ್ಲಪ್ಪ ರೆಡ್ಡಿಯವರ ಕನಸು ನನಸಾಗುವಂತೆ 200ಕ್ಕೂ ಹೆಚ್ಚು ಅರಣ್ಯವಾಸಿ ಸಸ್ಯಗಳು ಮರಗಳಾಗಿ ರೂಪಾಂತರಗೊಳ್ಳುತ್ತಿರುವುದು ಕಂಡಿತು. ಇದರ ಪರಿಚಯ ಮುಂದಿನ ಸಂಚಿಕೆಯಲ್ಲಿ ಪ್ರಕಟಗೊಳ್ಳಲಿದೆ.

ಬಂಗ್ಲೆ ಪೋಡು ಹಾಡಿಯ ರಾಮೇಗೌಡನದು 'ಸ್ಥಳಜನ್ಯ ಜ್ಞಾನದ ಸ್ಫೋಟದ ಸಂಗತಿ' ಆಗಿದೆ ಎಂದು ಮನವರಿಕೆ ಆಗುತ್ತದೆ. ನಿಸರ್ಗವೇ ಅಂದರೆ ಸ್ಥಳೀಯ ಪರಿಸರದ ಅನೇಕ ಸೂಕ್ಷಾತಿ ಸೂಕ್ಷ್ಮಸಂಗತಿಗಳು ಅವನು ಅರಣ್ಯ ಸಸ್ಯವರ್ಗಗಳ ನರ್ಸರಿ ಕಾಯಕ ಕೈಗೊಳ್ಳಲು ಕಾರಣವಾಗಿದೆ. ಅರಣ್ಯ ಸಸ್ಯವರ್ಗಗಳ ಬಗೆಗಿನ ಆತನಲ್ಲಿ ಅಂತರ್ಗ ವಾಗಿರುವ ಸೂಕ್ಷ್ಮ ಸಂಗತಿಗಳ ಬಗ್ಗೆ ಮಾಹಿತಿ ಸಂಗ್ರಹಿಸುವುದು ಒಂದು ಸವಾಲೇ ಸರಿ.

ಎಂದಿನಂತೆ ನಮ್ಮ ಅರಣ್ಯ ಇಲಾಖೆ ಅಧಿಕಾರಿಗಳು ಈತನ ಕಾರ್ಯಕ್ಕೆ ಪ್ರೋತ್ಸಾಹವನ್ನೇನು ನೀಡಲು ಮುಂದಾಗದಿದ್ದರೂ ಪುಣ್ಯವಾಶತ್ ಅಡ್ಡಿ ಬಂದಿಲ್ಲ ಎನ್ನುವುದನ್ನು ಕೇಳಿದಾಗ ಪ್ರಥಮದಾರಿಗೆ ಒಂದಷ್ಟು ಸಂತಸ ಪಡುವ ಸದಾವಕಾಶದಕ್ಕಿತು. ಕೆಲವು ಅಧಿಕಾರಿಗಳು ಈತನ ನರ್ಸರಿ ವೀಕ್ಷಿಸಿ ಹೋಗಿದ್ದಾರಂತೆ. ನಾವು ಏನೂ ಕೆಟ್ಟದ್ದು ಮಾಡದೇ ಇದ್ದರೆ ಏನೂ ತೊಂದರೆ ಆಗಲ್ಲ ಸಾಹೇಬ್ರ ಎಂದು ಹೇಳುವುದನ್ನು ರಾಮೇಗೌಡ ಮರೆಯಲಿಲ್ಲ.

ರಾಮೇಗೌಡ ಬಿಳಿಗಿರಿರಂಗನ ಬೆಟ್ಟದ ತಪ್ಪಲಿನಲ್ಲಿ ಬೆಳೆಯಬಹುದಾದ ಅರಣ್ಯ ಸಸ್ಯ ಸಂಪತ್ತಿನ ಬಗ್ಗೆ ಮಾಹಿತಿಯ ಕಣಜವೇ ಆಗಿದ್ದಾನೆ. 150–200ಕ್ಕೂ ಹೆಚ್ಚು ಗಿಡ, ಮರ ಬಳ್ಳಿಗಳ ಕುರಿತಾದ ಮಾಹಿತಿ ಈತನ ಅಂಗೈಯಲ್ಲಿವೆ. **'ವರ್ಜಿನ್ ಅರಣ್ಯ'** ಸಂಪತ್ತು ಉಳಿಯಬೇಕಿದ್ದರೆ ರಾಮೇಗೌಡನಂತಹ ಲಕ್ಷಾಂತರ ವ್ಯಕ್ತಿಗಳಿಗೆ ಈ ಸಮಾಜ ಅವಕಾಶವೀಯಬೇಕಾಗುತ್ತದೆ. ಕೇವಲ ಆತನನ್ನು ಗುರುತಿಸಿ ಸನ್ಮಾನಿಸುವುದರಿಂದ ಅರಣ್ಯದ ಪರಿಶುದ್ಧತೆಯನ್ನು ಉಳಿಸಲಾಗದು.

ನರ್ಸರಿಯಲ್ಲಿನ ಗಿಡಗಳ ಪರಿಚಯ ಮಾಡಿಕೊಡುತ್ತಾ ಹೋದಂತೆ ಆತನ ವೇಗಕ್ಕೆ ನಾನು ಸ್ಪಂಧಿಸಲು ಕಷ್ಟವಾಯಿತು. ಆತನ ಮಾತಿನಲ್ಲಿನ ಉಚ್ಚಾರಣೆ ನನಗೆ ಅಡ್ಡಿಯಾಗುತ್ತಿತ್ತು. ಆದರೂ ಒಂದಷ್ಟು ಮಾಹಿತಿಯನ್ನು ಹಿಡಿದಿಟ್ಟು ದಾಖಲಿಸುವ ಪ್ರಯತ್ನ ಈ ಮೊದಲ ಭೇಟಿಯಲ್ಲಿದೆ.

### ಹೊರಮುನಿ ಗಿಡದ ವಿಶೇಷತೆ

ಬೆಜ್ಜಾ ಇದು ಮೇಣದಉತ್ಪಾದನೆಗೆ ಬರತ್ತೆ ಗುರುಗಳೇ. ಇದು ಭಾರಿ ಮರ ಆಗುತ್ತೆ ಎಂದು ಕೈಯನ್ನು ಆಕಾಶದೆಡೆಗೆತ್ತಿ ತೋರಿಸಿದ. ಇದು ಜಾಲ ಧೂಪದ ಗಿಡ. ಇದು ಹೊರ ಮುನಿಗಿಡ ಎಂದು ಅಂಗೈ ಅಗಲಕ್ಕೆ ಹರಡಿಕೊಂಡಿದ್ದ ಗಿಡ ತೋರಿಸಿದ. ಇದನ್ನು ನಾನು ನೈಸರ್ಗಿಕ ಕೃಷಿಕ ಟಿ.ನರಸೀಪುರದ ಲಿಂಗಣ್ಣ ಅವರ ಕೃಷಿ ಭೂಮಿಯಲ್ಲಿ ನೋಡಿ ಮಾಹಿತಿ ಪಡೆದಿದ್ದೆ. ಇದರ ವಿಶೇಷತೆ ಮುಟ್ಟಿದರೆ ಮುನಿಗಿಡ. ನೀವು ಇದನ್ನು ಸ್ಪರ್ಶಿಸಿದ ತಕ್ಷಣವೇ ಒಳಮುಖವಾಗಿ ಮುದುರಿಕೊಳ್ಳುತ್ತದೆ. ಆದರೆ ಹೊರಮುನಿಗಿಡ ಮುಟ್ಟಿದಕೂಡಲೇ ಹೊರಮುಖವಾಗಿ ಮುದುರಿಕೊಳ್ಳುತ್ತದೆ. ಇದೂ ಕೂಡ ಔಷಧಿ ಗಿಡ. ಮುಟ್ಟಿದರೆ ಮುನಿಗಿಡವನ್ನು ಮಧುಮೇಹಕ್ಕೆ ಹಾಗೂ ಇನ್ನಿತರ ಅನಾರೋಗ್ಯ ನಿವಾರಣೆಗೆ ಬಳಸುತ್ತಾರೆ.

"ಇದು ಸುಂಕಕತ್ತಿಗಿಡ ಸಾಹೇಬ್ರ. ಇದೂ ಔಷಧಿಗಿಡ. ಮಕ್ಕಳಿಗಾಗುವ ಬೇಧಿ ಮತ್ತಿತರ ರೋಗಕ್ಕೆ ಉಪಯೋಗ ಆಗುತ್ತೆ ಎಂದ. ಇದು ಸೀಗೆ ಗಿಡ. ಮೆಳೆಯಂತೆ ಹಬ್ಬುವ ಜಾತಿಗೆ ಸೇರಿದ್ದು. ಇದು ಅರಳೆಕಾಯಿಗಿಡ. ಇದು ನೋಡ್ರಿ ಇದು ಕಾಡುಕೊತ್ತಮ್ಮೀರಿ. ಇದು ಲಕೊಟ್ಟೆ ಔಷಧಿಗೂ ಬರತ್ತೆ".

### ಮಾಟಿಮರದ ಉಪಯೋಗ

ಇದು ನೋಡ್ರಿ ಸ್ವಲ್ಪ ಅಗಲ ಎಲೆ ಇರುವ ಗಿಡ ಎಂದು ಗಿಡದ ಎಲೆಯನ್ನು ಕೈಯಲ್ಲಿಡಿದು ಇದು ಮಾಟಿಮರ ಸಾಹೇಬ್ರೆ. ಇದರ ಎಲೆಯಲ್ಲಿ ರೊಟ್ಟಿ ಮಾಡ್ತೀವಿ. ಅಂದ್ರ ಹಿಟ್ಟನ್ನು ತಟ್ಟಿ ಇದರ ಎಲೆಯೊಳಗೆ ಸುತ್ತಿಟ್ಟು ಬೇಯಿಸ್ತೀವಿ ಎಂದು ನಮ್ಮ ಬಾಯಲ್ಲೂ ನೀರೂರಿಸಿದ. ಆತ ಹೇಳುವ ದಾಟಿ ಗಮನಿಸಿದಾಗ ಆಗಲೇ ಆತ ಹಸಿದಿದ್ದು ಮಾಟಿಮರದ ಎಲೆ ಬಳಸಿ ತಯಾರಿಸುವ ಖಾದ್ಯ ಆತನಿಗೂ ನೆನಪಾಗಿತ್ತು ಎನ್ನುವುದು ನಮಗರ್ಥವಾಯಿತು. ನಾವು ಅರಿಸಿನದ ಎಲೆ ಬಳಸಿ ಇಡ್ಲಿ ಬೇಯಿಸ್ತೀವಿ. ಅದೇ ರೀತಿ ಮಾಟಿಮರದ ಎಲೆ ಉಪಯೋಗ. ಇದು ಔಷಧಿಗೂ ಕೂಡ ಬಳಕೆ ಆಗತ್ತದೆ ಎಂದು ಹೇಳಲು ಮರೆಯಲಿಲ್ಲ.

ಇನ್ನೊಂದು ಗಿಡ ತೋರಿಸಿ ಬೆಂಡೆ ಎಂದ. ಇದನ್ನು ಪೇಸ್ಟು ಮಾಡಿಕೊಂಡು ತಲೆಗಚ್ಚಿತ್ತೀವಿ. ತಂಪಾಗತ್ತೆ ಎಂದು ವಿವರಣೆಕೊಟ್ಟ. ಇದು ಕರ್ಪೂರದ ತುಳಸಿ, ಕಾಡುಗೇರುಗಿಡ, ಇದರ ಹಣ್ಣು ತಿನ್ನಿತ್ತೀವಿ, ಕಾಯಿ ತಿನ್ನಂಗಿಲ್ಲ. ಇದರ ರಸ ತುಟಿಸೋಂಕಿದ್ರೆ ಗಾಯ ಆಗುತ್ತೆ. ಹಣ್ಣು ತಿನ್ನಬೋದು ಎಂದು ಸ್ವಲ್ಪ ಧೀರ್ಘ ವಿವರಣೆ ನೀಡಿದ.

ಇದು ಗೊಂಟೆ ಹಣ್ಣು ಗಿಡ ಅಂತೀವಿ. ಇದು ಬಳ್ಳಿ ಜಾತಿಗೆ ಸೇರಿದ್ದು. ಇದು ಕಾಡು ಹತ್ತಿ, ಕಾಡು ಅಂಜೂರ, ಮಾದಾಳ ಹಣ್ಣು ಗಿಡ ಇದನ್ನು ಔಷಧಿಗೆ ಬಳಸ್ತೀವಿ. ನಿಶ್ಯಕ್ತಿಯಿಂದ ಕಣ್ಣು ಕತ್ತಲು ಬರೋದು , ಶಕ್ತಿ ಹೆಚ್ಚಿಸಿಕೊಳ್ಳಲು ಬಳಸ್ತೀವಿ ಎಂದ. ಹುಲ್ಲಿನಂತಿದ್ದ ಪೊದೆ ಗಿಡ ನಮಗೆ ಇದು ಲೆಮೆನ್ ಗ್ರಾಸು ಎಂಬುದು ತಿಳಿದಿತ್ತು. ಈತನೇನು ಹೇಳಿಯಾನು ಎಂದು ತಿಳಿಯುವ ಕುತೋಹಲವಿತ್ತು. ಆತ ಇದು ಹಂದಿಬಾಳೆ ಎಂದು ಹೇಳಿ ಅಚ್ಚರಿ ಹುಟ್ಟಿಸಿದ. ಎಲ್ಲೋ ನಾವೇದಾರಿತಪ್ಪಿದ್ದೀವಿ ಎಂದುಕೊಂಡೆವು. ಅದರ ಎಲೆ ಕಿತ್ತು ಮೂಸಿದಾಗ ಲೆಮನ್ ಗ್ರಾಸೇ ಆಗಿತ್ತು. ಅವರ ಭಾಷೆಯಲ್ಲಿ ಅದು ಹಂದಿ ಬಾಳೆಯಾಗಿತ್ತು.

ಪುಡುಮಾವು ಮರ. ಇದರ ಚೆಕ್ಕೆಯನ್ನು ಅತಿಸಾರಕ್ಕೆ ಬಳಸುತ್ತೀವಿ, ಇದರ ಚೆಕ್ಕೆಯನ್ನು ಗಂಧದ ಕಡ್ಡಿಗೂ ಬಳಸ್ತೀವಿ ಎಂದು ಪ್ರಸನ್ನಗೌಡರು ಹೇಳ್ದಾಗ ಆತ ಹೌದು ಎಂದ.

ಇದೇ ರುದ್ರಾಕ್ಷಿಗಿಡ ಎಂದು ಇದನ್ನು ಏಕ ಮುಖ ಕೂಡ ಅಂತಾರೆ ಎಂದ. ಆತನ ಕತ್ತಿನಲ್ಲಿದ್ದ ರುದ್ರಾಕ್ಷಿ ಮಣಿ ಮುಟ್ಟಿ ಇದೇ





## ಕೃಷಿಯಲ್ಲಿ ನೀರಿನ ಮಿತ ಬಳಕೆಗೆ ನಾನಾ ಪ್ರಯತ್ನ

ಕೃಷಿ ಅತಿ ಹೆಚ್ಚು ನೀರು ಕೇಳುವ ಕಸುಬುಗಳಲ್ಲಿ ಒಂದು. ಹೀಗಾಗಿ ಸಾಧ್ಯವಾದಷ್ಟು ಮಿತವಾದ ನೀರಿನಿಂದ ಕೃಷಿ ಮಾಡುವ ಬಯಕೆ ಕೃಷಿಕರದ್ದು. ಹೀಗಾಗಿ ನಿರಂತರ ಪ್ರಯತ್ನ ಸಾಗುತ್ತಲೇ ಇದೆ. ಅಮೆರಿಕದ ಕೆಲವು ಕೃಷಿಕರು ಈ ಹೊಸ ಪ್ರಯತ್ನದಲ್ಲಿದ್ದಾರೆ. ಡ್ರಿಫ್ ಇರಿಗೇಷನ್, ಸ್ಪ್ರಿಂಕ್ಲರ್ ನೀರಾವರಿ ಪದ್ಧತಿ ಜನಪ್ರಿಯ. ಇದು ಕಬ್ಬಿಣದ ಉದ್ದನೆಯ ನಳಿಕೆ ಹೊಂದಿದೆ. ಇದು ಚೂಪಾದ ದೊಡ್ಡ ಮೊಳೆಯ ಆಕೃತಿಯಲ್ಲಿದೆ. ಇದಕ್ಕೆ ಸಾಕಷ್ಟು ರಂಧ್ರಗಳು ಇವೆ. ಇದನ್ನು ಗಿಡದ ಅನತಿದೂರದಲ್ಲಿ ಭೂಮಿಗೆ ಹೂಳಲಾಗುತ್ತದೆ. ನಂತರ ಇದಕ್ಕೆ ನೀರಿನ ಕೊಳವೆ ಜೋಡಿಸಲಾಗುತ್ತದೆ. ಆಗ ನೀರು ನೆಲದೊಳಗೇ ಇಂಗುತ್ತಾ ಹೋಗುತ್ತದೆ. ಸೂರ್ಯಶಾಖಕ್ಕೆ ನೀರು ಆವಿಯಾಗದು ಎನ್ನುವುದು ಇದರ ಮಹತ್ವ.









ಗಿಡದ್ದಾ ಎಂದಾಗ ರಾಮೇಗೌಡನ ಗಡಸು ಮುಖದಲ್ಲಿ ನಗುಕಾಣಿಸಿಕೊಂಡಿತು. ತುಸು ನಾಚಿಕೆ ತೋರಿದ. ಇದು ಸ್ವಾಮಿ ಇಳಸಂಗಿ ಮರದ ಗಿಡ. ಮೈಕೈನೋವಿಗೆ ಇದನ್ನು ಬಳಸ್ತೀವಿ. ಇದು ಬಳ್ಳಿ ಜಾತಿ, ಹಬ್ಬತ್ತೆ. ಮುಳ್ಳು ಕೂಡ ಇದೆ ಮತ್ತಷ್ಟು ವಿವರ ನೀಡಿದ ಅದರಲ್ಲಿ ಕೆಲವು ನನಗರ್ಥವಾಗಲಿಲ್ಲ.

ಬಹುಷಃ ಕೆಲವು ದಿನಗಳು ಆತನೊಂದಿಗೆ ನರ್ಸರಿಯಲ್ಲಿ ಹಾಗೂ ಬೀಜ ಸಂಗ್ರಹಣೆಗೆಂದು ಆತನೊಡನೆ ಕಾಡಿನಲ್ಲೂ ಅಲೆದರೆ ಒಂದಷ್ಟು ಅರಣ್ಯ ಗಿಡಗಳ ರಹಸ್ಯ ಭೇದಿಸಬಹುದು ಎನಿಸಿತು. ಆದರೆ ಬೆಂಕಿಗೆ ಗಂಟೆಕಟ್ಟಬೇಕಷ್ಟೇ?

### ಅಂತರ್ಗತವಾಗಿರುವ ಸ್ಥಳೀಯ ಭೌಗೋಳಿಕ ಪರಿಜ್ಞಾನ

ಮೊದಲ ದೃಷ್ಟಿಗೆ ಆತನೊಬ್ಬ ಶುದ್ಧ ಅರಣ್ಯವಾಸಿ ಎನಿಸಿಬಿಡುತ್ತಾನೆ. ಮುಖಭಾವ ನೋಡಿದರೆ ಯಾವ ಭಾವನೆಯನ್ನು ಗುರುತಿಸಲಾಗದು. ಭಾವನೆಗಳಿಗೆ ಎಡೆಯಿಲ್ಲವೇನೂ ಈತನಲ್ಲಿ ಎನಿಸಿತು. ಆದರೆ ನರ್ಸರಿಯಲ್ಲಿನ ಗಿಡಗಳ ನಡುವೆ ನಡೆದಾಡುತ್ತಾ ದಟ್ಟಾರಣ್ಯದಿಂದ ಸಂಗ್ರಹಿಸಿ ತಂದು ಬೆಳೆಸಿದ ಗಿಡಗಳನ್ನು ಪರಿಚಯಿಸುವಾಗ ಆತನ ಮುಖದಲ್ಲಿ ಮಂದಹಾಸ ಮಿನುಗುತ್ತಿತ್ತು. ಕೆಲವು ಬಹುಪಯೋಗಿ ಗಿಡಗಳನ್ನು ಪರಿಚಯಿಸುವಾಗಂತೂ ಉತ್ಸಹದ ಬುಗ್ಗೆ ಆಗುತ್ತಿದ್ದ. ಇದನ್ನು ಕಂಡು ನನಗೆ ಗಿಡಗಳಂತೆ ಆತನಲ್ಲಿ ಈ ಅಪರಿಮಿತ ಆಸಕ್ತಿ ಮನೆ ಮಾಡಿದ್ದು ಹೇಗೆ ಎಂದು ತಿಳಿಯುವ ಕುತೂಹಲ ಹುಟ್ಟಿತು.

"ರಾಮೇಗೌಡ್ರೆ ನಿಮಗೆ ಈ ರೀತಿ ಕಾಡುಗಿಡಗಳನ್ನು ಬೆಳೆಸಲು ಯಾರು ಹೇಳಿದ್ದು?" ಎಂದೆ.

"ಇಲ್ಲಾ ಸಾಹೇಬ್ರ, ನಂಗೆ ಯಾರೂ ಹೇಳ್ಲಿಲ್ಲ. ನಾನೇ ಮಾಡ್ತಿದ್ದೀನಿ"..

"ಅಂದ್ರೆ ನನಗೆ ಅರ್ಥವಾಗಲಿಲ್ಲ" ಎಂದು ಆತನ ಮುಖ ನೋಡುತ್ತಾನಿಂತೆ. ನನ್ನ ಗೊಂದಲ ಅರ್ಥಮಾಡಿಕೊಂಡ ಆತ

"ನಾನು ಚಿಕ್ಕವನಾಗಿದ್ದಾಗನಿಂದಲೂ ಇದೇ ಮಾಡ್ತಾ ಬಂದೆ. ಸಣ್ಣವನಾಗಿದ್ದಾಗ ಗಿಡ, ಹಣ್ಣಿನ ಗಿಡ ನೇಡ್ತಾ ಇದ್ದೆ....ಹಾಗೆ ಬಂತು ಇದು" ಎಂದು ಮಾತುಗಳಲ್ಲಿ ತನ್ನಲ್ಲಿ ಹುಟ್ಟಿದ ನಿಸರ್ಗ ಪ್ರೀತಿಯನ್ನು ಸ್ಪಷ್ಟವಾಗಿ ವರ್ಣಿಸದಾದ. ಆದರೆ ನಮಗರ್ಥವಾಯಿತು.

"ಸುಮಾರು ಹದಿನೈದು ವರ್ಷದಿಂದ ಇದು ಮಾಡ್ತಾ ಬಂದಿದ್ದೀನಿ ಸಾಹೇಬ್ರ".

"ಡಾ.ಯಲ್ಲಪ್ಪರೆಡ್ಡಿ ನಿನಗೇನಾದ್ರು ಮಾಹಿತಿ ಕೊಡ್ತಾ ಇದ್ದಾರ ರಾಮೇಗೌಡ್ರೆ" ಎಂದೆ. ಹೌದು ಸಾಹೇಬ್ರು ಒಂದ್ಹೈದು ವರ್ಷದಿಂದ ಹೇಳ್ತಾ ಅವರೆ. ಇಂತ ಗಿಡ ತಗೊಂಡು ಬಂದು ಸಸಿ ಮಾಡು. ಇಂತ ಬೀಜ ಸಂಗ್ರಹಿಸಿ ಸಸಿ ಮಾಡಿಡು ಅಂತ ಹೇಳ್ತಾವ್ರೆ" ಎಂದು ವಿವರಣೆ ನೀಡಿದ.

"ಈ ಗಿಡಗಳನ್ನು ಎಲ್ಲಿಗೆ ಕೊಡು ಅಂತ ಹೇಳ್ತಾ ಇದ್ದಾರ?"

"ಹೂ ಸಾಹೇಬ್ರ, ಕೆಲವು ಸಂಸ್ಥೆಯವರು ಬಂದು ಇಸ್ಕೊಂಡೋತ್ತವರೆ. ನಿಮ್ಮಂಗೆ ಜನ ಬಂದು ನಮಗಿಷ್ಟು ಬೇಕು ಅಂತ ಕೇಳ್ತಾರೆ ಅವರಿಗೆಲ್ಲ ಕೊಡ್ತೀನಿ. ಒಂದಷ್ಟು ಜೀವನಕ್ಕೆ ಕಾಸುಸಿಗ್ತದೆ" ಎಂದು ತನ್ನ ಜೀವನೋಪಾಯದ ಬಗ್ಗೆ ಹೇಳಿದ.

"ನಿನಗೇನಾದರು ನಿಂದೇ ಅಂತ ಭೂಮಿ ಇದೆಯಾ?"

ಇದೆ, ನಮ್ಮ ತಂದೆ ಮುತ್ತಾತನಿಂದ ಬಂದಿದ್ದು ಮೂರು ಎಕ್ರೆ ಇದೆ. ಇದೇ ಆ ಭೂಮಿ, ಮುಕ್ಕಾಲು ಎಕ್ರೆಯಲ್ಲಿ ಈ ನರ್ಸರಿ ಮಾಡ್ತಿದ್ದೀನಿ" ಎಂದ. ಬೆಟ್ಟದ ಇಳಿಜಾರಿನಲ್ಲೇ ಈ ನರ್ಸರಿ ಇದೆ ಬೆಟ್ಟದ ಮುಖ್ಯ ರಸ್ತೆಗೆ ಅಂಟಿಕೊಂಡಂತಿದೆ.

### ಹಾಳು ಬಿದ್ದಿರುವ ಸರಕಾರಿ ನರ್ಸರಿ

ಈತನ ನರ್ಸರಿ ಪಕ್ಕದಲ್ಲೇ ಸರಕಾರಿ ಪೋಷಿತ ನರ್ಸರಿ ಇದೆ. ಇದು ಪಾಳು ಹಂಪೆಯಂತಿದೆ. ದೊಡ್ಡದಾಗಿರುವ ಬೋರ್ಡಿಗೆ




ಧೂಪದ ಗಿಡದ ನರ್ಸರಿ

ಬಳ್ಳಿ ಸುತ್ತುವರಿದಿದೆ. ಬೃಹತ್ ಗಾತ್ರದ ಕಬ್ಬಿಣದ ಬೋರ್ಡು ತುಕ್ಕು ಹಿಡಿದು ಬೀಳುವಂತಿದೆ. ನರ್ಸರಿ ಗಿಡಗೆಂಡೆ ಬೆಳೆದು ಗುರುತಿಸುವುದೂ ಕಷ್ಟವಾಗಿದೆ. ತೋಟಗಾರಿಕೆ ಅಥವಾ ಅರಣ್ಯ ಇಲಾಖೆಗೆ ಸೇರಿದೆಯೋ ಗೊತ್ತಿಲ್ಲ. ಅದ್ಭುತವಾಗಿ ನಡೆಸಬಹುದಾಗಿದ್ದ ಸರಕಾರಿ ನರ್ಸರಿ ಹಾಳು ಸುರಿಯುತ್ತಿದೆ. ಅಧಿಕಾರಿಗಳ ನಿರ್ಲಕ್ಷತನಕ್ಕೊಂದು ಇದು ತಾಜಾ ಉದಾಹರಣೆಷ್ಟೆ. ಇದರ ವರ್ಣನೆಗಾಗಿ ಪತ್ರಿಕೆ ಸ್ಥಳ ದುರ್ಬಳಿಕೆ ಮಾಡಿಕೊಳ್ಳುವುದು ಬೇಡ. ಇದು ಇಷ್ಟಕ್ಕೆ ಸೀಮಿತವಾಗಿರಲಿ!

"ಗಿಡಗಳಿಗೆ ಏನೇನು ಗೊಬ್ಬರ ಕೊಡ್ತೀಯಾ?"

"ಕೊಟ್ಟಿಗೆ ಗೊಬ್ಬರ ಹಾಕ್ತಿನಿ. ಒಂದು ಹಸು ಇದೆ, ಹೊರಗಿನಿಂದ ತಂದೂ ಹಾಕ್ತಿನಿ!"

"ರೋಗಗೀಗ ಬಂದ್ರೆ ಯಾವ ಔಷಧಿ ಹೊಡಿತ್ತೀಯಾ" ಎಂದೆ

"ಗಂಜಳ ಮತ್ತು ಸಗಣಿ ಹಾಕಿ ಸುಧಾರಿಸ್ತೀನಿ ಸಾಹೇಬ್ರ"

ರಾಮೇಗೌಡನ ಮಗಳು ಪುಷ್ಪ ಲವಲವಿಕೆಯಿಂದ ನರ್ಸರಿಯಲ್ಲಿ ಓಡಾಡುತ್ತಾ ತಂದೆ ಹೇಳಿದ ಗಿಡಗಳನ್ನು ತಂದು ಇಡುತ್ತಿದ್ದಳು". "ನಿನಗೂ ಗಿಡಗಳ ಪರಿಚಯ ಇದೆಯಾ ಮಗಳೇ" ಎಂದಿದ್ದಕ್ಕೆ ತಲೆ ಕುಣಿಸಿ ಹೌದೆಂದು ಸೂಚಿಸಿ ನಾಚಿಕೆಯಿಂದ ನಮ್ಮಿಂದ ದೂರವೇ ಉಳಿದಳು. ಆಕೆ ಶಾಲೆ ಕಲಿಯುತ್ತಿದ್ದಾಳೆ. ಬಿಡುವಿನ ವೇಳೆಯಲ್ಲಿ ತಾಯಿ ತಂದೆಗೆ ನೆರವಾಗುವುದರಿಂದ ಒಂದಷ್ಟು ಗಿಡಗಳ ಪರಿಚಯವಾಗಿದೆ ಆಕೆಗಿದೆ.

ನರ್ಸರಿ ಭೋರ್ಡುಕಾಣದೆ ಇರುವುದನ್ನು ಗಮನಿಸಿದ್ದ ನಾನು ಆ ಬಗ್ಗೆ ಪ್ರಶ್ನಿಸಿದಾಗ **'ಶ್ರೀಜಡೆರುಧ್ರಸ್ವಾಮಿ ನರ್ಸರಿ'** ಎಂದು

>> ಏಳನೇ ಪುಟಕ್ಕೆ <<

ಬಂಗ್ಲೆ ಪೋಡು ರಾಮೇಗೌಡರ ಕುಟುಂಬ



## ಪಕ್ಷಿಯ ಫಿಶ್ಶಿಂಗ್ ಟೆಕ್ಕನಿಕ್ಕು

ನೀರಿನದಡದಲ್ಲಿ ಕೂತ ಪಕ್ಷಿ ಮೀನಿಗಿಷ್ಟವಾದ ಯಾವುದೋ ಆಹಾರದ ಕುಣುಕುಗಳನ್ನು ನೀರಿಗೆಸೆಯುತ್ತದೆ. ತೀರ ದೊಡ್ಡ ಮೀನು ಆಹಾರದ ತುಣಕಿನ ಹತ್ತಿರ ಬಂದರೆ ಕೂಡಲೇ ತುಣುಕನ್ನು ತನ್ನಕೊಕ್ಕಿನಿಂದ ಮೇಲೆತ್ತಿಕೊಂಡು ಬಿಡುತ್ತದೆ. ಪುನಃ ಅದೇ ಆಹಾರ ತುಣುಕನ್ನು ನೀರಿಗಿಡುತ್ತದೆ. ಸಣ್ಣಗಾತ್ರದ ಮೀನು ಅದನ್ನು ತಿನ್ನಲು ಬಂದ ಕೂಡಲೇ ಗಬಕ್ಕನೆ ಹಿಡಿದು ನುಂಗುತ್ತದೆ. ಈ ಪಕ್ಷಿಗೆ ಫಿಶ್ಶಿಂಗ್ ಟೆಕ್ಕನಿಕ್ ಯಾರು ಹೇಳಿಕೊಟ್ಟರು?





# ಮೈಸೂರಿನಲ್ಲೊಂದು ಹಂಗಿಲ್ಲದ ಅರಮನೆ

>> **ಮೊದಲ ಪುಟದಿಂದ** <<

ತರಕಾರಿ ಮತ್ತು ಹಸಿರು ಗಿಡ ನೆಟ್ಟುಕೊಂಡು ಸಂತೃಪ್ತ ಜೀವನ ಶೈಲಿ ರೂಢಿಸಿಕೊಳ್ಳಬಹುದು.

ವಿಶೇಷವಾಗಿ ಮೈಸೂರು ನಗರದಲ್ಲಿ ಇಂತಹ ಪ್ರಯತ್ನಗಳು ನಡೆಯುತ್ತಿವೆ. ಕಾಂತರಾಜು ಅವರ ಮನೆಯೂ ಅದರಲ್ಲಿ ಒಂದಾಗಿದೆ ಎಂಬುದು ಖುಷಿಯ ಸಂಗತಿ.

ನೀರು ಮತ್ತು ವಿದ್ಯುತ್‌ಚ್ಛಕ್ತಿಯಲ್ಲಿ ಕಾಂತರಾಜ ಅವರ **'ಮನೆ ಹಂಗಿಲ್ಲದ ಅರಮನೆ'!**

ಮೂರನೆ ಮಹಡಿಯಲ್ಲಿ 5KV ಕಿಲೋವ್ಯಾಟ್‌ಗಳ ಸೋಲಾರ್ ಪ್ಯಾನೆಲ್‌ಗಳನ್ನು ಅಳವಡಿಸಿಕೊಂಡಿದ್ದಾರೆ. ಇದರಿಂದ ಮನೆಗೆ ಬೇಕಾಗುವ ವಿದ್ಯುತ್‌ಚ್ಛಕ್ತಿ ಬಳಸಿಕೊಂಡು ಉಳಿದಿದ್ದನ್ನು ಗ್ರಿಡ್‌ಗೆ ನೀಡುತ್ತಾರೆ. ಅದಕ್ಕೆ ಇಲಾಖೆಯಿಂದ ಯುನಿಟ್‌ಗೆ 4.20 ರೂ.ಗಳನ್ನು ಮನೆಯವರಿಗೆ ನೀಡುತ್ತಾರೆ. ಸೋಲಾರ್ ಪ್ಯಾನೆಲ್ ಅಳವಡಿಸಿರುವ ಶೆಡ್ ಕೆಳಭಾಗದಲ್ಲಿ 18–20 ಬಗೆಯ ತರಕಾರಿಗಳು ಸೊಪ್ಪುಗಳನ್ನು ಬೆಳೆಯುವ ನಾನಾ ಗಾತ್ರ ಕುಂಡಗಳಿವೆ. ಬೆಳಗಿನ ಒಂದು ಗಂಟೆ ಕಾಂತರಾಜ್ ಮತ್ತು ಶ್ರೀಮತಿ ಕಾಂತಮಣಿ ಕಾಂತರಾಜ್ ಕೈತೋಟಕ್ಕೆ 'ಶ್ರಮ' ಮೀಸಲಿಟ್ಟಿದ್ದಾರೆ.

### ಕೃತಕ ಮಳೆಗಾಗಿ ಹಾಗೂ ದಿನಬಳಕೆಗೆ ಮಳೆನೀರು ಪೂರ್ಣಬಳಕೆ

40×60 ಅಳತೆಯ ಮನೆಯ ತಾರಸಿ ಮೇಲೆ ಬೀಳುವ ಅಷ್ಟೂ ಮಳೆ ನೀರು ಸದ್ಬಳಿಕೆ ಆಗುತ್ತಿದೆ. ಮನೆಯೊಳಗಿನ ಕಿರುಜಲಪಾತಕ್ಕೆ ಮಹಡಿ ಮೇಲಿನ ಹೆಂಚು ಛಾವಣಿಯಿಂದ ಕೃತಕ ಮಳೆ ನೀರು ಬಿಡುವ ವ್ಯವಸ್ಥೆ ಸರಳವಾಗಿದೆ. ಕಡುಬೇಸಿಗೆಯಲ್ಲಿ ಮನೆಯೊಳಗೆ ಮಳೆರಾಯ ಅವತರಿಸುತ್ತಾನೆ. ಎರಡು ಮಳೆನೀರು ಶೋಧಕಗಳಿರುವುದರಿಂದ ಬಿದ್ದ ಮಳೆ ಹನಿಯೆಲ್ಲಾ ಎರಡು ಟ್ಯಾಂಕುಗಳಲ್ಲಿ ಬಂಧಿತವಾಗುತ್ತದೆ.

ನೀರು, ವಿದ್ಯುತ್‌ಚ್ಛಕ್ತಿ ಪೂರೈಕೆಯಲ್ಲಿ ಮನೆ ಸ್ವಾಲಂಭಿಯಾಗಿ **'ಹಂಗಿಲ್ಲದ ಅರಮನೆ'** ಆಗಿದೆ. ನಮ್ಮ **'ಗ್ರೀನ್ ಪವರ್'** ಪತ್ರಿಕೆ ಕೂಡ ಮಳೆ ನೀರು ಸದ್ಬಳಿಕೆಗೆ ಮಾಹಿತಿ ನೀಡಲು ಸದಾ ಸಿದ್ಧವಿದೆ. ಆಸಕ್ತರು **ಸಂಪರ್ಕಿಸಬಹುದು.**

### ಅಡಿಗೆ ಮನೆಯಲ್ಲಿ ಎಣ್ಣೆ ತೆಗೆಯುವ ಪುಟ್ಟಯಂತ್ರ (ಗ್ರೈಂಡರ್)

ಮನೆಯೊಂದು ಮಾಲಿನ್ಯಗಳಿಂದ ದೂರವಿರಲು ಬಯಸಿದರೆ ನೊರೆಂಟು ದಾರಿಗಳಿವೆ. ಕೇವಲ 12000 ರೂಗಳಿಗೆ ಕಡ್ಲೆಕಾಯಿ ಬೀಜ, ತೆಂಗು, ಕೊಬ್ಬರಿ ಇನ್ನಿತರೆ ಎಣ್ಣೆ ಬೀಜಗಳಿಂದ ಅಡಿಗೆ ಮನೆಯಲ್ಲೇ ಒಂದೆರಡು ನಿಮಿಷಗಳಲ್ಲಿ ರಾಸಾಯನಿಕ ಮುಕ್ತ, ವಿಷಮುಕ್ತ, ಕಲಬೆರಕೆ ಮುಕ್ತ ಎಣ್ಣೆ ತೆಗೆದು ಶ್ರೀಮತಿ ಕಾಂತಮಣಿ ಅಡಿಗೆಗೆ ಬಳಸಿಕೊಳ್ಳುತ್ತಾರೆ. ಎಣ್ಣೆ ತೆಗೆದ ನಂತರ ಕಡ್ಲೆ ಉಳಿಕೆಯಿಂದ ಕಡ್ಲೆ ಬರ್ಫಿ ಮಾಡಿಕೊಂಡು ರುಚಿನೋಡುತ್ತಿದ್ದಾರೆ. ಉಳಿಕೆ ಕಡ್ಲೆ ಸಿಪ್ಪೇ ಹಿಂಡಿರೂಪದಲ್ಲಿ ಗಿಡಗಳಿಗೆ ಗೊಬ್ಬರವಾಗಿಯೂ ಬಳಕೆಯಾಗುತ್ತಿದೆ.



ಕಡ್ಲೆಕಾಯಿ ಎಣ್ಣೆ ತೆಗೆಯುವ ಯಂತ್ರ

### ಪ್ರಸಿದ್ಧ ಕಂಪನಿಗಳ ಬ್ರಾಡೆಂಡ್ ಎಣ್ಣೆ ವಿಷ ಮುಕ್ತವೇ ನೀವೇ ನಿರ್ಧರಿಸಿ

ಒಂದು ಕೆಜಿ ಕಡ್ಲೆ ಬೀಜಕ್ಕೆ ಬೆಲೆ 120ರೂಗಳು. ಒಂದು ಕೆಜಿ ಕಡ್ಲೆ ಬೀಜದಿಂದ 450ಗ್ರಾಂ ಎಣ್ಣೆ ಬರುತ್ತದೆ. ಅಂದ್ರೆ ಒಂದು ಲೀಟರ್ ಕಡ್ಲೆಕಾಯಿ ಎಣ್ಣೆ ತೆಗೆಯಲು ಕನಿಷ್ಟ 2.5ಕೆಜಿ ಕಡ್ಲೆ ಬೀಜ ಬೇಕು. ಅಲ್ಲಿಗೆ ಬೀಜಕ್ಕೆ 300ರೂ ವೆಚ್ಚ, ಪ್ಯಾಕೆಟ್ ಮಾಡುವ ವೆಚ್ಚ, ಸಾಗಣಿಕೆ ವೆಚ್ಚ, ದುಬಾರಿ ಜಾಹಿರಾತು ವೆಚ್ಚ, ಮಾಲೀಕರ ಲಾಭದ ಅಂಶದ ವೆಚ್ಚ ಎಲ್ಲಾ ಸೇರಿದರೆ ಶುದ್ಧ ಬ್ರಾಂಡೆಡ್ ಎಣ್ಣೆ ಲೀಟರ್ ಒಂದಕ್ಕೆ 600–700 ರೂಗಿಂತಲೂ ಹೆಚ್ಚಾಗಿ ಬೇಕಲ್ಲವೆ?

ಆಗಿದ್ದರೆ ಬ್ರಾಂಡೆಡ್ ಕಂಪನಿ ಎಣ್ಣೆ ಅವರೇ ಹೇಳಿಕೊಳ್ಳುವಂತೆ 120ರೂಗಳಿಗೆ ಸಿಗಲು ಹೇಗೆ ಸಾಧ್ಯ. ಆಯ್ಕೆ ನಮ್ಮ ಹಕ್ಕು ಆಗಿರಬೇಕಷ್ಟೆ. ಅನೇಕ ಅಡಿಗೆ ಎಣ್ಣೆ ಮಾರಾಟಗಾರರು ಲಾಭದ ಆಸೆಗಾಗಿ ಪೆಟ್ರೋಲಿಯಂ ಉತ್ಪಾದನೆ ಮಾಡುವಾಗ ಸಿಗುವ ಇನ್ನಿತರ ಉತ್ಪನಗಳಲ್ಲಿ ಒಂದಾದ ಪ್ಯಾರಾಸಿನ್ ಆಯಿಲ್ ಎಂಬ ರಾಸಾಯನಿಕ ಬಿಳಿದ್ರವ್ಯವನ್ನು ಇಂತಹ ಎಲ್ಲಾ ಎಣ್ಣೆಗೆ ಬಳಸುತ್ತಿದ್ದಾರೆ ಎಂದು ಪ್ರಸಿದ್ಧ ಟಿ.ವಿ ಚಾನೆಲ್ ಒಂದು ರೈಡ್ ಮಾಡಿದಾಗ ಕಂಡು ಬಂದಿದೆ. ಈ ಪ್ಯಾರಾಸಿನ್ ದ್ರಾವಣ ಬಣ್ಣವಿಲ್ಲದ್ದು, ರುಚಿ ಇಲ್ಲದ್ದು, ವಾಸನೆ ಇಲ್ಲದ್ದು ಆಗಿದೆ. ಹೀಗಾಗಿ ಕಾಳ ಸಂತೆಕೋರರಿಗೆ ಕಲಬೆರಕೆ ಇಂದು ಸುಲಭದ ದಾರಿ ಆಗಿದೆ.

ಹೀಗಾಗಿ ನಗರಗಳಲ್ಲಿ ಮನೆ ನಿರ್ಮಾಣ ಮಾಡುವಾಗಲೇ 50–70ಸಾವಿರ ಲೀಟರ್ ನೀರು ಸಂಗ್ರಹಾಗರದ ಟ್ಯಾಂಕ್ ಕಟ್ಟಿಸಿಕೊಂಡು ಬಿಡಿ. ಇದರಿಂದ 5–6 ಜನರಿರುವ ಮನೆ 7–8 ತಿಂಗಳು ಕಾಲ ಮಳೆ ನೀರಿನಲ್ಲೇ ಅವಶ್ಯಕತೆ ಪೂರೈಸಿಕೊಳ್ಳಬಹುದು. ಇನ್ನುಳಿದ 3 ತಿಂಗಳು ಮಳೆಗಾಲದ ನೀರು ಸಾಕಾಗುತ್ತದೆ. ಕಾವೇರಿ–ಕಬಿನಿ ನೀರು ಇನ್ನೂ ಹೆಚ್ಚುದಿನ ದೊರೆಯಲಾಗದು. ಅವುಗಳ ನೀರು ಬಹುವಾಗಿ ರಾಸಾಯನಿಕಗಳಿಂದ ಕಲುಷಿತವಾಗಿದೆ. ಕಾಂತರಾಜ್ ಅವರ ಮನೆಯಂತೆ ನಗರದ ಮನೆಗಳು ಸಾಕಷ್ಟು ವಿಚಾರಗಳಲ್ಲಿ ಸ್ವಾವಂಭಿತನ ಸಾಧಿಸಲಿ ಎಂಬುದೇ ಗ್ರೀನ್ ಪವರ್ ಪತ್ರಿಕೆ ಆಶಯ.

ಕೈತೋಟದಲ್ಲಿನ ತರಕಾರಿಗಳು

ಛಾಯಾಚಿತ್ರ: ಮಹೇಶ್‌ಕಲ್ಯಾಣ್





ಸೋಲಾರ್ ಪ್ಯಾನಲ್ ಶೀಟುಗಳು

**ಕರಿಬೇವು, ಲೆಮನ್ ಗ್ರಾಸ್, ಬೆಂಡೆಕಾಯಿ, ಅಲವೇರಾ, ದೊಡ್ಡಪತ್ರೆ, ಪಪ್ಪಾಯಿ, ನುಗ್ಗೆ, ಬದನೆ, ಬೀನ್ಸ್, ಟಮೋಟೊ, ಬೆಟ್ಟದ ನೆಲ್ಲಿ, ಚಪ್ಪರದ ಅವರೆ, ನಿಂಬೆ, ಮೆಣಸಿ, ದಾಳಿಂಬೆ, ಕಿತ್ತಳೆ, ವಿಳ್ಳೆದೆಲೆ, ಬಸಳೆ ಸೊಪ್ಪು, ಜವನ ಎಲ್ಲವೂ ಇದೆ.**

**ಕುಬ್ಜವಾಗಿ ಬೆಳೆಯುವ ಡಾರ್ಫ್ ವೆರೈಟಿಯ 2 ತೆಂಗಿನ ಗಿಡ, ಸೀಬೆ, ಮಾವು, ಬಟರ್ ಫ್ರೂಟ್ ಕೂಡ ಇವೆ. ಇದನ್ನು ನೋಡಲು ಹೋಗುವ ಆಸಕ್ತರಿಗೆ ಶ್ರೀಮತಿ ಕಾಂತಮಣಿ ಕಾಂತರಾಜು ಅವರು ಕೈತೋಟದಲ್ಲಿನ ಲೆಮನ್ ಗ್ರಾಸ್ ಗಿಡದ ಎಲೆಯಿಂದ ಮಾಡಿದ ಲೆಮನ್ ಗ್ರಾಸ್ ಟೀ ಕೊಟ್ಟು ಔದಾರ್ಯ ಮೆರೆಯುತ್ತಾರೆ. ಮನಸ್ಸು ಕೆಡಿಸುವ ಕೆಟ್ಟ ಧಾರಾವಾಹಿಗಳಿಂದ ದೂರವಿರಲು ಕೈತೋಟ ನೆರವೀಯುವುದರಿಂದ ಮೈ–ಮನಸ್ಸು ಹಗುರ ಎನ್ನುತ್ತಾರೆ ದಂಪತಿಗಳು.**

**ಇರುವ ಆರು ಜನಕ್ಕೆ 300ಲೀಟರ್ ಸೋಲಾರ್ ವಾಟರ್ ಹೀಟರ್‌ನಿಂದ ಬಿಸಿ ನೀರು ಲಭ್ಯ**

ಮಳೆ ನೀರು ಶುದ್ದೀಕರಿಸಿ ಬಿಡುವ ಸಲಕರಣೆ



ನೀರು ಸಂಗ್ರಹ ಟ್ಯಾಂಕ್







**ಮಾಹಿತಿಗಾಗಿ ಸಂಪರ್ಕಿಸಿ:**
**ಶ್ರೀ ಕಾಂತರಾಜ್, B.E., Civil**
**ಮೊ. 9844012018**



## ವಿಶ್ವದಲ್ಲೇ ಅತಿ ಉಚ್ಚಸ್ವರದಲ್ಲಿ (ಗಟ್ಟಿಯಾಗಿ) ಕೂಗುವ ಪಕ್ಷಿ ಬಿಳಿ ಬೆಲ್ ಬರ್ಡ್ (WHITE BELLBIRD)

ಕುತೂಹಲದಿಂದ ಇದರ ಕೂಗನ್ನು ಕೇಳಲು ಹೋದಾಗ ಕಿವಿಗೆ ಇಯರ್ ಫೋನ್ ಧರಿಸಿದ್ದೆ. ಅದೇಷ್ಟು ಜೋರಾಗಿ ಕೂಗಿಬಿಡುತ್ತದೆ ಇದು ಮಹಾ ಎಂದೆಣಿಸಿದ್ದೆ. ಅದು ಕೂಗಲು ಪ್ರಾರಂಭಿಸಿದ ಕೂಡಲೇ ಇಯರ್ ಫೋನ್ ಕಿತ್ತೆಸೆಯಬೇಕಾಯಿತು. ಉಚ್ಚಸ್ವರದಲ್ಲಿ ಮಾತ್ರವಲ್ಲ ಇದರ ಶಬ್ಧಕೂಡ ಅತಿಯಾದ ಕರ್ಕಶವಾಗಿತ್ತು. ನೋಡಲು ಬೆಳ್ಳಗೆ ಸುಂದರವಾಗಿದ್ದರೂ ಬಾಯಿ ಬಿಟ್ಟರೆ ಬಣ್ಣಗೇಡು ಬಾಯಿ ಬೊಂಬಾಯಿ ಅಂತೀವಲ್ಲಾ ಹಾಗಿತ್ತು ಈ ಬಿಳಿ ಬೆಲ್ ಬರ್ಡ್‌ಕೂಗು. ಇದರ ಸ್ವರ 125 ಡೆಸಿಬಲ್‌ನ್ನು ಹೊಂದಿದೆ ಎಂದು ವಿಜ್ಞಾನಿಗಳು ಅಳೆದಿದ್ದಾರೆ.






# ವಿನಾಶದ ದಾರಿ! – ಮುಂಬೈ ಕೋಸ್ಟಲ್‌ರೋಡ್

ಮನುಷ್ಯರ ಅಭಿವೃದ್ಧಿ ಚಿಂತನೆಗಳೆಲ್ಲ ಮನುಷ್ಯ ಕೇಂದ್ರಿತವಾಗಿದ್ದು ನಿಸರ್ಗದ ವಿನಾಶಕ್ಕೆ ಮುನ್ನುಡಿ ಬರೆಯುವಂತಿರುತ್ತದೆ. ಇತ್ತೀಚೆಗೆ ಬಾಂಬೆ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾದ ಪ್ರದೀಪ್ ನಂದ್ರಜೋಗ್ ಅವರು ಟಿಪ್ಪಣಿಯೊಂದನ್ನು ಅಂಗೀಕರಿಸಿದರು. ಜೂನ್ 18ರಂದು ಒಟ್ಟು ಎಂಟು ಅರ್ಜಿಗಳು **'ಮುಂಬೈ ಕೋಸ್ಟಲ್‌ರೋಡ್'** ನಿರ್ಮಾಣವನ್ನು ವಿರೋಧಿಸಿ ಅವರ ಮುಂದೆ ಬಂದಿದ್ದವು. ಜುಲೈ 16 ರಂದು ಕೋರ್ಟು, ಕಡಲತೀರದುದ್ದಕ್ಕೂ ನಿರ್ಮಿಸಲು ಉದ್ದೇಶಿಸಿದ ರಸ್ತೆಯನ್ನು ನಿರ್ಮಿಸಬಾರದೆಂದು ಆದೇಶ ನೀಡಿತು.

1.7 ಬಿಲಿಯನ್ ಅಮೆರಿಕನ್ ಡಾಲರ್ ಮೌಲ್ಯದ ಅಂದಾಜು ವೆಚ್ಚದ ಯೋಜನೆ ಇದಾಗಿತ್ತು. ಅತಿ ದುಬಾರಿ ಮೂಲಸೌಕರ್ಯ ಕಲ್ಪಿಸುವ ಯೋಜನೆ ಇದಾಗಿದ್ದು ಇಡೀ ಪೂರ್ವ ಕರಾವಳಿ ಪ್ರದೇಶವನ್ನು ಮುಂಬೈ ಮಹಾನಗರಿಗೆ ನೇರ ಸಂಪರ್ಕದಲ್ಲಿರಿಸಲು ಉದ್ದೇಶಿಸಿತ್ತು. ಆದರೆ ಸಿಟಿಜನ್ ಗ್ರೂಪ್ ಮತ್ತು ಪರಿಸರವಾದಿಗಳು ಇದರ ವಿರುದ್ಧ ಹೋರಾಡಿ ಗೆದ್ದರು.

35.6 ಕಿ.ಮೀ ಕಡಲತೀರದಲ್ಲಿರುವ ಅಪೂರ್ವ ಜೀವ ಸಂಕುಲ, ಸಸ್ಯ ಸಂಕುಲದ ನಾಶಕ್ಕೆ ಇದು ಕಾರಣವಾಗುತ್ತಿತ್ತು. ಸಮುದ್ರ ತೀರದ ಮುಂಬೈ ಮೂಲ ನಿವಾಸಿಗಳಾದ **'ಕೋಲಿ ಸಮುದಾಯ'** ಸಮುದ್ರ ತೀರದ ಮೀನುಗಾರಿಕೆ ಮತ್ತಿತ್ತರ ಚಟುವಟಿಕೆಗಳನ್ನು ಜೀವನೋಪಾಯಕ್ಕೆ ಆಧರಿಸಿಕೊಂಡಿದ್ದರು. ಸರಿಸುಮಾರು 2000 ಕುಟುಂಬಗಳು ಸಮುದ್ರವನ್ನವಲಂಭಿಸಿದ್ದವು. ಪ್ರತಿನಿತ್ಯ 2ಕಿ.ಮೀ ಸಮುದ್ರದೊಳಗೆ ಹೋಗಿ ಮೀನುಗಾರಿಕೆ ನಡೆಸುತ್ತಾರೆ.



ಆದರೆ ಸರಕಾರ ಇವರಿಗೆ ಪರಿಹಾರ ಹಣ ನೀಡುವುದಾಗಿ ಆಸೆ ಹುಟ್ಟಿಸಿತು. ಒಂದು ಹೊತ್ತಿನ ಕೂಳಿಗೆ ವರ್ಷದಕೂಳು ಕಳೆದುಕೊಳ್ಳಲು ಸಮುದಾಯ ಒಪ್ಪಿಕೊಳ್ಳಲಿಲ್ಲ. ಅಲ್ಲದೆ ನ್ಯಾಯಲಯ ಕೂಡ 35.6ಕಿ.ಮೀ ತೀರದುದ್ದಕ್ಕೂ ಕಾಂಕ್ರೀಟ್ ಸೇತುವೆ ನಿರ್ಮಾಣದಿಂದ ಉಂಟಾಗುವ ಪರಿಸರದ ಅಸಮತೋಲನದ ಮಾಹಿತಿಯನ್ನು ಸ್ವೀಕರಿಸಿ ಆಗಬಹುದುದಾದ ವಿನಾಶದ ದಾರಿ ನಿರ್ಮಾಣವಾಗುವುದನ್ನು ತಡೆಗಟ್ಟಿತು.

ಮುಂಬೈನ ಶೇಕಡ 43ರಷ್ಟು ಜನ ಸಾರಿಗೆಗೆ ಅವಲಂಭಿಸಿರುವುದು ರೈಲು ದಾರಿಯನ್ನೆ. ಆದರೆ ದುಬಾರಿ ವೆಚ್ಚದಿಂದ ನಿರ್ಮಿಸಲು ಉದ್ದೇಶಿಸಿರುವ ರಸ್ತೆ ಉಳ್ಳವರ ಸಲುವಾಗಿತ್ತು. ಸತ್ಯಮನವರಿಕೆ ಮಾಡಿಕೊಂಡ ನ್ಯಾಯಾಲಯ ನಿಸರ್ಗದ ಪರ ನಿಂತಿತು.

## ನಿಮಗೆ ಒಳ್ಳೆಯದಾದಾಗ, ಸಂಕಟ ಬಂದಾಗ ಭೂಮಿಯ ಋಣ ತೀರಿಸಲು ಅವಕಾಶವಿದೆ

ತಾಯಿ ನಮಗೆ ಜನ್ಮ ನೀಡಿದರೆ, ಭೂಮಿತಾಯಿ ನಮ್ಮೆಲ್ಲರನ್ನು ಸಲಹುತ್ತಾಳೆ. ಈಕೆಯನ್ನು ನಾವು ಪ್ರೀತಿ ಗೌರವಾಧಾರಗಳಿಂದ ಕಾಣ ಬೇಕೆಂಬುದು ನಮ್ಮ ಪ್ರಾಥಮಿಕ ಹೊಣೆಗಾರಿಕೆ. ಇದರಿಂದ ಭೂಮಿ ಉಳಿದು ನಾವು ಸುರಕ್ಷಿತವಾಗುಳಿಯುತ್ತೇವೆ.

ಇಂದು ಭೂಮಿ ಜ್ವರ ಏರುತ್ತಿದೆ. ಜ್ವರವನ್ನು ಕಡಿಮೆ ಮಾಡದೇ ಹೋದರೆ ವಿನಾಶ ಗ್ಯಾರಂಟಿ. ಇದಕ್ಕಾಗಿ ನಾವು ಮರಗಿಡಗಳನ್ನು ನೆಟ್ಟುಬೆಳೆಸಬೇಕಿದೆ. ಇದು ಕೇವಲ ಅರಣ್ಯ ಇಲಾಖೆಯೊಂದರ ಕೆಲಸವಲ್ಲ. ನಾವೆಲ್ಲರೂ ಪಾಲ್ಗೊಳ್ಳಬೇಕಿದೆ.

ಅಲ್ಲಲ್ಲಿ ಸಹೃದಯರು **'ಪರಿಸರ ಸಂಘ'**ಗಳನ್ನು ಕಟ್ಟಿಕೊಂಡು ಕೆಲಸ ಮಾಡುತ್ತಿದ್ದಾರೆ ವಯಕ್ತಿಕವಾಗಿ ಕೂಡ ನಾವು ಕಾಣಿಕೆ ಸಲ್ಲಿಸ ಬಹುದು. ನಮ್ಮ ಹುಟ್ಟು ಹಬ್ಬದಂದು ಗಿಡವೊಂದನ್ನು ನೆಟ್ಟು ಬೆಳೆಸುವ, ಮನೆಯೊಂದರಲ್ಲಿ ಮಗು ಹುಟ್ಟಿದಾಗ ಅದರ ಸವಿನೆನಪಿಗೆ ಗಿಡನೆಟ್ಟು ಬೆಳೆಸೋಣ. ಪ್ರೀತಿಪಾತ್ರರಾದವರು ಗತಿಸಿದಾಗ ಅವರ ನೆನಪು ಹಸಿರಾಗಿರಲು ಗಿಡವೊಂದನ್ನು ನೆಟ್ಟು ಕಾಪಾಡೋಣ.

ಹೀಗೆ ನಮ್ಮಗಳಿಕೆ, ಲಾಭ, ಅನುಕೂಲ ಹೆಚ್ಚಿದಂತೆಲ್ಲಾ ಭೂಮಿ ತಾಯಿಗೂ ಪಾಲು ನೀಡಿ ಗೌರವಿಸಿದರೆ, ಪ್ರೀತಿಸಿದರೆ ಆಕೆ ಕೂಡ ಸಂತುಷ್ಟಳಾಗಿ ನಮ್ಮನ್ನು ಸುಖದಿಂದಿರಿಸುವಳಲ್ಲವೇ?





>> ಐದನೇ ಪುಟದಿಂದ <<

ಹೆಸರಿಟ್ಟಿರುವುದು ತಿಳಿಯಿತು. ಇದು ಆತನ ಮನೆದೇವರು.

ಈತನ ತಂದೆ, ತಾಯಿ ಕೂಲಿನಾಲಿ ಮಾಡ್ತಾ ಇದ್ದರು. ಕಾಲವಾಗಿದ್ದಾರೆ. ರಾಮೇಗೌಡನ ಹುಟ್ಟಿದ ಊರೇ ಈ ಬಂಗ್ಲೆ ಪೋಡು ಹಾಡಿ. ಬಂಗ್ಲೆ ಪೋಡು ಹೆಸರಿನಲ್ಲಿ **'ಬಂಗ್ಲೆ'** ಎಂಬ ಪದ ಆಧುನಿಕವಾಗಿದ್ದನ್ನು ತಿಳಿಯಲು ಬಂಗ್ಲೆ ಅಂತ ಯಾಕೆ ಸೇರಿಸಿಕೊಂಡಿದ್ದಿ ರಾಮೇಗೌಡ ಅಂದೆ.

**"ಸಾಹೇಬ್ರ, ಅದು ಬ್ರಿಟಿಷರು ಕಟ್ಟಿದ ಬಂಗ್ಲೆ ಪಕ್ಕವೇ ಈ ಪೋಡು ಇರಾದು. ಅದಕ್ಕೆ ಬಂಗ್ಲೆ ಪೋಡು ಹಾಡಿ ಎಂದಾಗಿದೆ"** ಎಂದು ಊರ ಹೆಸರಿನ ಚರಿತ್ರೆ ಚುಟುಕಾಗಿ ತಿಳಿಸಿದ. ಆತನೇ ಮುಂದುವರಿದು ನನ್ನ ಕುತೋಹಲ ತಣಿಸಲು ಮತ್ತಷ್ಟು ಮಾಹಿತಿ ನೀಡಿದ.

**"ಈ ಹಾಡಿಗೆ ಸೇರ್‍ದಂಗೆ ಸೀಗೆ ಬೆಟ್ಟ, ಕಾಲೋನಿ, ಎರ್ಕಿನಗದ್ದೆ, ಮತ್ತಾಗ ಗದ್ದೆ, ಹೊಸ ಪೋಡು, ಬಂಗ್ಲೆ ಪೋಡು, ಕಲ್ಯಾಣಿ ಪೋಡುಗಳು ಇವೆ"** ಎಂದು ಪೋಡುಗಳ ವಿವರಣೆ ನೀಡಿದ.

ಹಾಡಿಗಳಲ್ಲಿ ವಿಶೇಷವಾಗಿ ರೊಟ್ಟಿಹಬ್ಬ ನಡೆಯುತ್ತದೆ. ಹೊಸರಾಗಿಯಿಂದ ವಿಶೇಷವಾಗಿ ಸಂಕ್ರಾಂತಿಗೂ ಮೊದಲೇ ಈ ಹಬ್ಬ ನಡೆಯುತ್ತದೆ. ಇವರ ಮುಖ್ಯ ಆಹಾರ ಕಾಡಿನಲ್ಲಿ ದೊರೆಯುವ ಹಣ್ಣು ಹಂಪಲ ಮತ್ತು

## 'ಕಾಡಿನ ಮೇಧಾವಿ' ಬಂಗ್ಲೆ ಪೋಡು ಹಾಡಿಯ ರಾಮೇಗೌಡ

ಸೊಪ್ಪುಸದೆ, ಜೊತೆಗೆ ಈಗ ಸರಕಾರಿ ಪಡಿತರ ಅಕ್ಕಿ ಕೂಡ ಸೇರಿಕೊಂಡಿದೆ. ಮುಂದೆ ಈ ಅಕ್ಕಿ ಸೇವನೆಯೇ ಹಾಡಿಯ ಜನರ ಮನ ಹೊಕ್ಕರೆ ಅವರಲ್ಲೂ ಮಧುಮೇಹ ಮನೆಮಾಡಿಕೊಳ್ಳುವುದು ಖಚಿತ ಎನಿಸಿದೆ.


ಈತನ ಬಂಗ್ಲೆ ಪೋಡಿನಲ್ಲಿ ಅಂದಾಜು ನೂರು ಜನಸಂಖ್ಯೆ ಇರಬಹುದು. ಮೈಸೂರಿನಿಂದ ಬಿಳಿಗಿರಿರಂಗ ಬೆಟ್ಟಕ್ಕೆ ಹೋಗುವ ಹೆದ್ದಾರಿಯ ಬಲಭಾಗದಲ್ಲೇ ಇದೆ. ಬಿಳಿಗಿರಿರಂಗ ದೇವಸ್ಥಾಕ್ಕೆ ಒಂದು ಕಿಲೋ ಮೀಟರ್ ಹಿಂದಕ್ಕೆ ಬಂಗ್ಲೆ ಪೋಡು ಹಾಡಿ ಇದೆ.

ಬಿಳಿಗಿರಿರಂಗನಾಥಸ್ವಾಮಿ ಬೆಟ್ಟದ ಕಿಬ್ಬರಿಯಲ್ಲಿ ಸದ್ದಿಲ್ಲದೆ ವರ್ಜಿನ್ ಅರಣ್ಯ ಕ್ರಾಂತಿಗೆ ನೀರೆರೆಯುತ್ತಾ ಕಾಯಕದಲ್ಲಿ ತೊಡಗಿರುವ ಬಂಗ್ಲೆ ಪೋಡು ಹಾಡಿಯ ರಾಮೇಗೌಡನ ಕಾಯಕದ ಮೌಲ್ಯ ಕಟ್ಟುವುದು ಸುಲಭದ ಕೆಲಸವಲ್ಲ ಎನಿಸಿತು. ಈತನಿಂದ ಮಾಹಿತಿಯನ್ನು ನನಗೆ ತೃಪ್ತಿಯಾಗುವವರೆಗೂ ಸಂಗ್ರಹಿಸಬೇಕೆಂದು ಹೋದ ನನಗೆ ನಿರಾಸೆಯೇ ಆಯಿತು. ಮತ್ತೆ ಆತನ ಬಳಿ ಹೋಗಿ ಪೂರ್ಣ ಅಂತೆನೂ ಅಲ್ಲದಿದ್ದರೂ ನನಗೆ ಒಂದಷ್ಟು ಸಮಾಧಾನ ತರುವಷ್ಟಾದರೂ ಮಾಹಿತಿ ಸಂಗ್ರಹಿಸಲು ನಿರ್ಧರಿಸಿರುವೆ.

ರಾಮೇಗೌಡನ ಬಳಿ ಆ ಭಾಗದ ಅರಣ್ಯ ಸಂಪತ್ತಿನ ನಿಘಂಟೇ ಇದೆ. ಆ ನಿಘಂಟಿನ ಸದ್ಬಳಿಕೆಯನ್ನು ಜನ ಸಾಮಾನ್ಯರು, ಸರಕಾರ ಸದ್ಬಳಿಕೆ ಮಾಡಿಕೊಳ್ಳಬೇಕಷ್ಟೆ. ಈತ ಮತ್ತು ಈತನ ಕಾಯಕ ಹೊರ ಜಗತ್ತಿಗೆ ಪರಿಚಯಗೊಳ್ಳಲು ಮತ್ತೊಬ್ಬ ಪರಿಸರ ಪ್ರೇಮಿ ನಿವೃತ್ತ ಐ.ಎಫ್.ಎಸ್ ಅಧಿಕಾರಿಗಳಾದ ಡಾ.ಯಲ್ಲಪ್ಪರೆಡ್ಡಿಯವರೂ ಕಾರಣಕರ್ತರು. ರಾಷ್ಟ್ರದಲ್ಲೇ ದಕ್ಷ, ಪ್ರಮಾಣಿಕ ಅಧಿಕಾರಿಗಳೆಂದು ಹೆಸರು ಮಾಡಿದ ಡಾ.ಯಲ್ಲಪ್ಪರೆಡ್ಡಿಯವರು ಇಂತಹ ಅಪರೂಪದ ವ್ಯಕ್ತಿಗಳ ಯಶಸ್ಸಿನ ಹಿಂದೆ ಇದ್ದಾರೆ ಎನ್ನುವುದು ಒಂದಷ್ಟು ವರ್ಜಿನ್ ಅರಣ್ಯ ಸಂಪತ್ತು ಉಳಿಯುತ್ತದೆ ಎಂಬ ನಂಬಿಕೆ ತರಿಸುತ್ತದೆ.

ಬಂಗ್ಲೆ ಪೋಡು ಹಾಡಿಯ ರಾಮೇಗೌಡನಂತಹ ಸಂತತಿ ರಾಜ್ಯದ ತುಂಬೆಲ್ಲ ಹುಟ್ಟಿಕೊಳ್ಳಲಿ ಎಂದು ಹಾರೈಸುತ್ತಾ **'ಗ್ರೀನ್ ಪವರ್'** ಪತ್ರಿಕೆಗೆ ಅಮೂಲ್ಯವಾದ ಮಾಹಿತಿ ನೀಡಿದ ರಾಮೇಗೌಡರಿಗೆ ವಂದಿಸುತ್ತೇನೆ. ಅವರ ಕಾಯಕಕ್ಕೆ ಯಾವ ಅಡೆತಡೆಯೂ ಬಾರದಿರಲಿ ಎಂದೂ ಹಾರೈಸುವೆ.

**ಸಂಪರ್ಕ ವಿಳಾಸ:** ರಾಮೇಗೌಡ, ಶ್ರೀಜಡೆರುದ್ರಸ್ವಾಮಿ ನರ್ಸರಿ, ಬಂಗ್ಲೆಪೋಡು, ಬಿಳಿಗಿರಿರಂಗನ ಬೆಟ್ಟ. ದೂರವಾಣಿ: 8861995754




> “ನಾವು ಹಕ್ಕಿಗಳ ಪರಿಸರವನ್ನು ನಾಶಮಾಡಿ, ಅವುಗಳು ಬದುಕುವ ಹಕ್ಕನ್ನು ಕಸಿದುಕೊಂಡರೆ, ಅವಕ್ಕೆ ನಮ್ಮಂತೆ ಮಾತಾಡಲು ಬರುವುದಿಲ್ಲ. ಅವು ತಮಗಾಗುತ್ತಿರುವ ಅನ್ಯಾಯದ ವಿರುದ್ಧ ಕೋರ್ಟಿಗೆ ಹೋಗಲಾರವು. ಅವಕ್ಕೆ ಓಟಿನ ಹಕ್ಕೂ ಇಲ್ಲ. ಅವು ನಮ್ಮತ್ತ ನಿಸ್ಸಹಾಯಕ ಮುಗ್ಧ ನೋಟ ಬೀರಿ ನಿರ್ಗಮಿಸುತ್ತವೆ. ಕೆಲವೊಮ್ಮೆ ಶಾಶ್ವತವಾಗಿ. ಅವುಗಳ ನಿರ್ಗಮನ ನಮ್ಮ ನಿರ್ಗಮನದ ಮುನ್ನುಡಿಯಷ್ಟೆ. ಏಕೆಂದರೆ ಅವು ಬದುಕಲಾರದ ಪರಿಸರದಲ್ಲಿ ನಾವೂ ಬದುಕಲಾಗುವುದಿಲ್ಲ”
>
> – ಪೂರ್ಣಚಂದ್ರ ತೇಜಸ್ವಿ






# ಜಲಕ್ಷಾಮದಲ್ಲೂ ಮಣ್ಣಿನಲ್ಲಿ ಜೀವವಿಡಿದು ಬದುಕಲೆತ್ನಿಸುವ ಮೀನುಗಳು




ನಾನು ಕೆರೆಕಟ್ಟೆ ನೀರು ಬತ್ತಿದಾಗ ಉಳಿಯುವ ಬಗ್ಗಡದ ನೀರಿನಲ್ಲಿ ಮೀನುಗಳು ಬದುಕುಳಿಯಲು ಪ್ರಯತ್ನಿಸಿದ್ದನ್ನು ಕಂಡಿದ್ದೇನೆ. ಆದರೆ ಕೆರೆ ಅಥವಾ ನದಿಯ ನೀರು ಬತ್ತಿದಾಗ ಲಭ್ಯವಿರುವ ತೇವಾಂಶದಲ್ಲೇ ನೆಲದೊಳಗೆ ಬದುಕಲು ಪ್ರಯತ್ನಿಸುವ ಮೀನಿನ ಪ್ರಯತ್ನ ಅಚ್ಚರಿ ಮೂಡಿಸುತ್ತಿದೆ.

ಕೆರೆ ನೀರು ಬತ್ತಿದಂತೆ ಮೀನುಗಳೂ ಉಳಿಗಾಲವಿಲ್ಲ ಎಂದು ತಿಳಿದು ಬಗ್ಗಡದಲ್ಲಿ ಒಳಸರಿಯುತ್ತವೆ. ಕ್ರಮೇಣ ಮಣ್ಣಿನ ಮೇಲು ಹೊದಿಕೆ ಒಣಗಿ ಗಟ್ಟಿಯಾಗುತ್ತದೆ. ಬಿಸಿಲಿನ ಝಳಕ್ಕೆ ಬಿರುಕೂ ಮೂಡುತ್ತದೆ. ಭಾರತ ಹಾಗು ಆಫ್ರಿಕದ ಅನೇಕ ಗ್ರಾಮವಾಸಿಗಳಿಗೆ ಈ ಸಂಗತಿ ಗೊತ್ತು. ಜೀವನೋಪಾಯಕ್ಕೆ ಬೇಸಿಗೆಯಲ್ಲಿ ಆಗಾಗ್ಗೆ ಇಂತಹ ಜಾಗದಲ್ಲಿ ಭೂಮಿ ತೋಡುತ್ತಾರೆ.

ಉದ್ದನೆಯ ಮೀನು ಒಂದು ಮಡಿಕೆಯಾಗಿ ನಿಶ್ಚಲ ಸ್ಥಿತಿಗಿಳಿದು ಮಲಗಿರುತ್ತದೆ. ಕ್ರಮೇಣ ಅದರ ಮೈ ಮೇಲಿನ ಲೋಳೆಯಂತಹ ಪದರದ ಭಾಗ ಗಡುಸಾಗಿ ಒಂದು ಪ್ಲಾಸ್ಟಿಕ್ ಬ್ಯಾಗ್‌ನಂತಾಗುತ್ತದೆ. ಅದರೊಳಗೆ ತೇವಾಂಶ ರಕ್ಷಿಸಲ್ಪಡುತ್ತದೆ. ಹೀಗೆ ಸಮಾಧಿ ಸ್ಥಿತಿಗಿಳಿದ ಮೀನುಗಳು ತಿಂಗಳು ಗಟ್ಟಲೆ ಜೀವವಿಡಿದು ನೀರಿಗಾಗಿ ಕಾಯುತ್ತವೆ. ಮಳೆಗಾಲ–ಪ್ರಾರಂಭಗೊಂಡಾಗ ಇವು ಸುಪ್ತಾವಸ್ಥೆಸ್ಥಿತಿಯಿಂದ ಹೊರ ಬರುತ್ತವೆ. ಬೇಸಿಗೆಯಲ್ಲಿ ಇವುಗಳ ಜಾಡು ಹಿಡಿದ ಮನುಷ್ಯರು ಆಹಾರ ಹೊಂದಿಸಿಕೊಂಡು ಮಳೆಗಾಗಿ ಕಾಯುತ್ತಾರೆ. ಮೀನಿನಂತಹ ಜಲಚರಗಳೂ ಕೂಡ ಮಳೆಗಾಗಿ ಕಾಯುತ್ತವೆ. ಆದರೆ ಅವುಗಳು ಬಾಹ್ಯ ಶತ್ರುಗಳಾದ ಪ್ರಾಣಿ, ಪಕ್ಷಿಗಳು ಮತ್ತು ಮನುಷ್ಯರಿಂದಲೂ ತಮ್ಮ ರಕ್ಷಣೆಗಾಗಿ ಹೋರಾಡುತ್ತಲೇ ಮಣ್ಣಿನಡಿಯಲ್ಲಿ ಆಶ್ರಯ ಬಯಸುತ್ತವೆ. ಭೀಮನೊಂದಿಗೆ ಗಧಾಯುದ್ಧಕ್ಕೆ ಮುನ್ನ ದುರ್ಯೋಧನ ವೈಶಂಪಾಯ ಸರೋವರದಲ್ಲಿ ಅಡಗಿದ್ದಂತೆ!


















# ನಿಸರ್ಗದ ಅತಿ ಸಣ್ಣ ಸಂಗತಿಗಳ ಕೌತುಕಗಳು ನಮ್ಮ ಅರಿವಿಗೆ ಬರುವುದಿಲ್ಲ

ಹೌದು! ನಮ್ಮ ಸುತ್ತಲಿನ ಪರಿಸರದಲ್ಲಿ ಕೆಲವು ಸಂಗತಿಗಳನ್ನು ಕ್ಷುಲ್ಲಕ ಸಂಗತಿಗಳೆಂದು ನಿರ್ಲಕ್ಷಿಸಿ ಬಿಡುತ್ತೇವೆ. ಪ್ರತಿಯೊಂದು ಪ್ರಾಣಿ, ಪಕ್ಷಿ, ಕ್ರಿಮಿಕೀಟಗಳು ಕೂಡ ಎಂತಹದೇ ವಿಷಮ ಪರಿಸ್ಥಿತಿಯಲ್ಲಿ ಬದುಕುಳಿಯಲು ನಿಸರ್ಗ ತನ್ನದೇ ತಂತ್ರಗಳನ್ನು ನೀಡಿರುತ್ತದೆ. ನೀವು ಚಿತ್ರದಲ್ಲಿ ನೋಡುತ್ತಿರುವುದು ಪುಟ್ಟ ಪಕ್ಷಿಯೊಂದು ಪ್ರಪಾತದ ಇಳಿಜಾರಿನ ಕಲ್ಲು ಪೊಟರೆಯ ನಡುವೆ ಓಡಾಡುತ್ತಿದ್ದ ಕೀಟವೊಂದನ್ನು ಭಕ್ಷಿಸಲು ಹಾರಿ ಹೋಗುತ್ತಿದೆ. ಕೀಟಕ್ಕೆ ಬಾಯಿ ಹಾಕಿದಾಗ ತಕ್ಷಣ ಅತಂತ್ಯ ವಿಷಪೂರಿತ ಹಾವು ವೈಪರ್ ತಕ್ಷಣವೇ ಪಕ್ಷಿಯನ್ನು ಹಿಡಿದುಬಿಡುತ್ತದೆ. ಕಚ್ಚಿದ ತಕ್ಷಣ ಹಾವಿನ ತೀಕ್ಷ್ಣ ವಿಷಕ್ಕೆ ಪಕ್ಷಿ ಕೂಡಲೇ ಸಾವನ್ನಪ್ಪುತ್ತದೆ. ಸಾಮಾನ್ಯವಾಗಿ ವೈಪರ್‌ನಂತಹ ಹಾವುಗಳಿಗೆ ಚಲನೆ ಬಹಳ ಮಂದಗತಿಯಲ್ಲಿರುತ್ತದೆ. ನಾವು ಕೊಳಕುಮಂಡಲ ಎಂದು ಕರೆಯುವ ಜಾತಿಗೆ ಸೇರಿದ ವೈಪರ್ ಹಾವು. ವೈಪರ್ ಹಾವಿನ ಬಾಲದ ತುದಿ ಒಂದು ಕೀಟದ ಮಾದರಿಯಲ್ಲಿ ವಿನ್ಯಾಸಗೊಂಡಿದೆ. ಈ ಬಾಲವನ್ನು ಹಾವು ಹೊರಚಾಚಿ ಅಲುಗಾಡಿಸುತ್ತಿರುವಾಗ ದೂರದಲ್ಲಿ ಕುಳಿತ ಪಕ್ಷಿಗಳು ಇದನ್ನು ಕೀಟವೆಂದು ಭ್ರಮಿಸಿ ತಿನ್ನಲು ಬಂದಾಗ ಹಾವಿಗೆ ಆಹಾರವಾಗುತ್ತದೆ. ಇದೇ ರೀತಿ ಅನೇಕ ಕೀಟಗಳು ಕೂಡ ಪಕ್ಷಿಗಳಿಂದ ಪಾರಾಗಲು ಮರದ ತೊಗಟೆಯ ರೀತಿ ತಮ್ಮ ರೂಪವನ್ನು ಬದಲಿಸಿಕೊಂಡು ಪ್ರಾಣಾಪಾಯದಿಂದ ಪಾರಾಗುವುದನ್ನು ನಿಸರ್ಗದಲ್ಲಿ ನಾವು ನೋಡಬಹುದು.




ಜೀವ ಕೌತುಕ







## ಇದು ಮರೀಚಿಕೆಯೇ?

ಭಾರತ ಶೇ. 98ರಷ್ಟು ತಾಳೆ ಎಣ್ಣೆಯನ್ನು ಹೊರದೇಶದಿಂದ ಆಮದು ಮಾಡಿಕೊಳ್ಳುತ್ತಿದೆ. ಇದು ಎಷ್ಟು ದಿನ ನಡೆಯಬಹುದು. ಭಾರತ ಸುಸ್ಥಿರವಾದ ದಾರಿಯನ್ನು ಕಂಡುಕೊಳ್ಳಲು ಸಾಧ್ಯವಿಲ್ಲವೆ? ಸಧ್ಯ ಭಾರತ ತಾಳೆ ಎಣ್ಣೆಯನ್ನು ಆಮದು ಮಾಡಿಕೊಳ್ಳುತ್ತಿರುವ ದೇಶ ದ್ವೀಪ ರಾಷ್ಟ್ರ ಇಂಡೋನೇಶಿಯದ ಸುಲವೆಸ್ಸಿ ಎಂಬ ಸ್ಥಳದಿಂದ. ಇದು ಪರಿಸರದ ಅಸಮತೋಲನದಿಂದ ನರಳುತ್ತಿರುವ ಪ್ರದೇಶವಾಗಿದೆ. ಕಾರಣ ಎಲ್ಲೆಂದರಲ್ಲಿ ತಾಳೆ ಗಿಡಗಳ ಅರಣ್ಯವೇ ಬೆಳೆದು ನಿಂತು ಸ್ಥಳೀಯ ಪರಿಸರವನ್ನು ಉಸಿರುಗಟ್ಟಿಸುತ್ತಿದೆ. ಭಾರತ ಭವಿಷ್ಯದಲ್ಲಿ ತಾಳೆ ಎಣ್ಣೆ ಉತ್ಪಾದನೆಯಲ್ಲಿ ಸ್ವಾವಲಂಭಿತನ ಸಾಧಿಸುವುದು ಮರೀಚಿಕೆಯೇ?




**ಹೊಸ ಪ್ರಕಟಣೆ**

**‘ಜಲ ಬೀಜ’ ಬಿತ್ತುವ ಜಾದೂಗಾರ ರಾಜೇಂದ್ರಸಿಂಗ್**




**“ಸೃಷ್ಟಿಕರ್ತನಷ್ಟೇ ಮನುಷ್ಯ ಪರಿಣಾಮಕಾರಿ...!”**

“ಮನುಷ್ಯನೊಬ್ಬನ ಅದಮ್ಯ ಚೇತನದಿಂದ ಮರಳುಗಾಡಿನಿಂದಲೇ ಆವೃತವಾದ, ಮಳೆಗಾಲ ಅಪರೂಪವೆನ್ನುವ ಭಾರತದಲ್ಲಿನ ರಾಜಾಸ್ತಾನದ ‘ಅಲ್ವಾರ್’ ಜಿಲ್ಲೆಯಲ್ಲಿ ಕಾಣೆಯಾಗಿದ್ದ ಐದು ನದಿಗಳು ಜೀವ ತಳೆದವು. ಈ ಘಟನೆಯನ್ನು ಮೆಲುಕು ಹಾಕಿದಾಗ ಮನಸ್ಸು ಮಾಡಿದರೆ ಮನುಷ್ಯನೂ ಸೃಷ್ಟಿಕರ್ತನಷ್ಟೇ ಪರಿಣಾಮಕಾರಿ ಕಾಯಕ ಮಾಡಬಲ್ಲ. ಕೇವಲ ವಿನಾಶ ಆತನ ಚಿಂತನೆಯಲ್ಲ ಎಂಬುದನ್ನು ಲೋಕಕ್ಕೆ ಸಾಧಿಸಿ ತೋರಿಸಿದ ವ್ಯಕ್ತಿ ಬೇರೆ ಯಾರೂ ಅಲ್ಲ, ಅವರೇ ನಮ್ಮ ಮ್ಯಾಗ್ಸೇಸೆ ಪ್ರಶಸ್ತಿ ಪುರಸ್ಕೃತ ರಾಜೇಂದ್ರಸಿಂಗ್”



**Registered with Register of Newspapers for India Under RNI No. KARKAN/2017/70919**
Postal License No. KA/SK/MYS/1105/2019-2021 Date of Posting: Every Month 10th to 15th, Saraswathipuram HO

ಗ್ರೀನ್ ಪವರ್
ನಿರ್ಭಯ, ನಿರಂತರ ಪರಿಸರ ಪ್ರಿಯರ ತಿಂಗಳ ಪತ್ರಿಕೆ

ಮುದ್ರಿತ ವಿಷಯ
ತೆರೆದ ಅಂಚೆ



**ಗ್ರಾಮೀಣ ಪ್ರಕಾಶನ**
“ದೇವೀರಿ” #1925, ಬೋಗಾದಿ 2ನೇ ಹಂತ, ಅಮೃತ ವಿದ್ಯಾಪೀಠ ರಸ್ತೆ, ಮೈಸೂರು–26
Ph: 8762771148, e-mail: rajub55@yahoo.com, grammenamys@gmail.com


GREEN POWER – Printed, Published and Owned by Raju B., Printed at Guptha Offset Printers # 1130/5-6, 8th Main, SJH Road, Vidyaranyapuram, Mysore-570008 and published at # 1925, 'DEVEERI', Bogadi 2nd Stage, Amruthavidyapeeta Road, CFTRI Layout, Mysore – 570 026. Editor-Raju B.